387

ಮೈಸೂರ ಗಿಜಿಟ್.

ಸಂ. XXXI.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 39.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 1, ಸ॥ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ಸ್, ರೆಜಿಸ್ಟ್ರೇರ್ಷ ವ ಯಜ್ಯುಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ಸ್ ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಅಕ್ಕುಗಳು ವ ರೆಗ್ಯುಲೇರ್ಷಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

Iನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 9ನೇ ಸೆಪ್ಟಂಬರ್ 1896.

ನಂ. 2714.—ಪಿ. 420, ಸ॥ 1883ನೇ ಜುಲೈ 11ನೇ ಮತ್ತು ಂ 190ನೇ ನಂಬರ್ ಗವರ್ಮೆಂಟಿನ ಈ ಕೆಳಗೆ ಕಂಡ ಇಸ್ತಿಹಾರ್‌ನಾಮೆಯು ಸಕಲರ ತಿಳುವಳಿಕೆ ಬಗ್ಯೆ ಪುನಶ್ಚ ಫಾಯಿಷ್ಮಾಡಲ್ಪಟ್ಟಿರುತ್ತೆ:—

"ತಾಬೇದಾರೀ ಗವರ್ಮೆಂಟ್ ಉದ್ಯೋಗಸ್ಥರುಗಳಿಂದ ಉದ್ಯೋಗಗಳು, ಬಡ್ತಿಗಳು ವ ಬಹಲ್‌ಗಳು ಮತ್ತು ಹೆಚ್ಚಾದ ವೇರ್ಷಗಳು ಇವುಗಳಿಗಾಗಿ ಅರ್ಜಿಗಳು ದಿವ್ವಾರವರ ಆಫಿಸಿನಲ್ಲಿ ಬಾರಿಬಾರಿಗೂ ಕೊಡಲ್ಪಡುತ್ತಲಿವೆ. ಅಂಥಾ ಅರ್ಜಿಗಳಿಗೆ ಯಾವ ವಿಧವಾದ ಗಮನವೂ ಕೊಡುವದಿಲ್ಲ. ಅವುಗಳು ಆಯಾ ಇಲಾಖೆಗಳ ವೊಖ್ತೇಸರರುಗಳ ಮೂಲಕ ಕಳುಹಿಸಲ್ಪಡಬೇಕು, ಅಥವಾ ಅರ್ಜೀದಾರನು ದಾಖಲಾಗಿದ್ದ ಇಲಾಖೆಯು ಮೊಕೂಫ್ ಮಾಡಲ್ಪಟ್ಟಿದ್ದರೆ ಆತನಿಗೆ ನವೆಕರಿಗಾಗಿ ಅಪ್ಪಣೆಯಾಗಿದ್ದ ಇಲಾಖೆಯ ವೊಖ್ತೆಸರರ ಮೂಲಕ ಕಳುಹಿಸಲ್ಪಡಬೇಕು."

ತಾರೀಖು 8ನೇ ಸೆಪ್ಟಂಬರ್ 1896.

ನಂ. 3401.—ಲೋ. ಫಂ. 257—92, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡ ಮತ್ತು ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಅಯ್ಯಣ್ಣನ ಪೇಟೆಯಿಂದ ಪುರುಷೋತ್ತಮ ಪಂತನಕೆರೆಗೆ ಬಂದು ರಸ್ತೆಯನ್ನು ಹಾಕುವ ಬಗ್ಯಾಗಿ ಬೇಕಾಗಿರುತವೆ:—

ನಂಬರು.	ಮಾಲೀಕರ ಹೆಸರು.	ಜಮೀನು ಮತ್ತು ಮನೆಯ ತಪ್ಶೀಲು.	ತೆಗೆದುಕೊಳ್ಳಬೇಕಾದ ವಿಸ್ತೀರ್ಣ.			ಜಕ್ಕುಬಂದಿ.			
			ಸ್ಕ್ವೇರ್ ಗಜ.	ಕಾಲ್ಭಾಗ.	ಬಿಘಾ ಗುಂಟೆ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಗಜಗಳು.						
1	ಶಟ್ಟಿ ಮಹಾಲಿಂಗಪ್ಪ	ಸಾಧಾರಣ ಹೆಂಚಿನ ಮನೆ	3	8	24	ಕಲ್ಲಿಕೃಷ್ಣಪ್ಪನ ಬೈಲು ಅಂಗಳಗಳ	ಮಾಲೀಕರ ಮನೆಯ ವಿಸ್ತೀರ್ಣ ಭಾಗ	ಅಯ್ಯಣ್ಣನ ಪೇಟೆ	ಮಾಲೀಕರ ಬೈಲು ಅಂಗಳ
2	ಡಿಟೋ	ಬೈಲು ಅಂಗಳ	3	41	123	ಡಿಟೋ	ಮಾಲೀಕರ ಮುಖ್ಯ ಕಟ್ಟಡ ಮತ್ತು ಭಾವಿ	ಮಾಲೀಕರ ಮೇಲ್ಕಂಡ ಹೆಂಚಿನ ಮನೆ	ವಕೀಲ್ ಶ್ರೀನಿವಾಸರಾಯರ ಹಿತ್ತಲು

ತಾರೀಖು 17ನೇ ಸೆಪ್ಟಂಬರ್ 1896.

ನಂ. 3785.—ಮಿ. 790, ಈ ವರುಷಕ್ಕಾಗಿ ದಸರಾ ರಜಾಗಳು 1896ನೇ ಅಕ್ಟೋಬರ್ 6ನೇ ಮಂಗಳವಾರದ ಲಾಗಾಯ್ತು 23ನೇ ಶುಕ್ರವಾರದ ವರಿಗೆ ಉಭಯ ದಿನಗಳೂ ಕೂಡಿ ಕೊಡಲ್ಪಡುವವು.

2. ಜರೂರಿಯಾತ್ ಕೆಲಸದ ಬಗ್ಯಾಗಿ ಇಲಾಖೆಗಳ ಮೊಖ್ತೇಸರರುಗಳಿಂದ ಏರ್ಪಾಡುಗಳು ಮಾಡಲ್ಪಡುವವು.

ತಾರೀಖು 9ನೇ ಸೆಪ್ಟಂಬರ್ 1896.

ನಂ. 3452.—ಲೋ. ಫಂ. 65—96, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ, ಸಕ್ಲೇಶಪುರದ ಷಹರ್ ಬಡಾಯಿಸುವ ಬಗ್ಯಾಗಿ ಬೇಕಾಗಿರುತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ತೆಗೆದುಕೊಳ್ಳಬೇಕಾದ ಜಮೀನಿನ ತಪ್ಶೀಲು.				ಜಕ್ಕುಬಂದಿ.			
					ಸರ್ವೇ ನಂ.	ತಪ್ಶೀಲು.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
							ಎ. ಗುಂ.	ರೂ. ಆ. ಪೈ.				
ಹಾಸನ.	ನಂಜಿರಾಯಪಟ್ಟಣ.	ಸಕ್ಲೇಶಪುರ.	ಸಕ್ಲೇಶಪುರ.	ಜನ್ನೆಬಿ ಸಾಹೇಬಿಗ	105	ಖುಷ್ಕಿ	3—10	1—4—0	ಸರ್ವೇ ನಂಬರ್ 107	ರಸ್ತೆ	ಸರ್ವೇ ನಂ. 103 ಮತ್ತು 104	ಸರ್ವೇ ನಂ. 106
					ಸರ್ವೇ ನಂ. 107ರಪೈಕಿ	ಡಿಟೋ	0—29	0—4—0	ಸರ್ವೇ ನಂಬರ್ 110ನೇ 111	ಸರ್ವೇ ನಂ. 105 ಮತ್ತು 106	ಸರ್ವೇ ನಂ. 108 ಮತ್ತು 39	ಸರ್ವೇ ನಂ. 111
				ಹುಚ್ಚಬೈರಬಿ ಈರ								
				ಜೋಯಿಸ ಕೃಷ್ಣಭಟ್ಟ, ಹುಚ್ಚಬೈರಬಿ ಈರ	ಡಿಟೋ	ಡಿಟೋ	0—30	0—4—0	..	..	..	..
				ನಿಂಗಾಬಿ ಮರಿನಿಂಗ	ಡಿಟೋ	ಡಿಟೋ	0—30	0—4—0	..	..	..	..
				ಜನ್ನಾಬಿ ಸಾಹೇಬಿಗ	ಡಿಟೋ	ಡಿಟೋ	3—16	0—4—0	..	..	..	..
							5—25	2—0—0				
				ಪಡವಲ್ ಬಿ ಅಯ್ಯಾಸಾಮಿ	113	ಡಿಟೋ	0—29	0—4—0	ಸರ್ವೇನಂ. 112 ಗ್ರಾಮನಿವೇಶನ	ಸರ್ವೇ ನಂ. 111	ಸರ್ವೇ ನಂ. 111	ಸರ್ವೇ ನಂ. 115

ತಾರೀಖು 23ನೇ ಸೆಪ್ಟಂಬರ್ 1896ನೇ ಇಸವಿ.

ನಂ. 4084.—ಮಿ. 837.—ಸ್ರ್ 1894ನೇ ಇಸವಿ ಜೂನ್ 10ನೇ ಮಕ್ಕುಂ 21572—ಜಿ. ಎಫ್. 99.—93ನೇ ನಂಬರುಳ್ಳ ಇಸ್ತಿಹಾರ್‌ನಾಮೆಯೊಡನೆ ಸಾದರ್ಪಡಿಸಲ್ಪಟ್ಟ ನಿಯಮಗಳನುಸರಿಸಿ, ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ, ಯಿದರಡಿ ಕಂಡ ತಖ್ತೆಯು, ಸರ್ವರ ತಿಳುವಳಿಕೆ ಬಗ್ಗೆ ಘಾಯಿಷ್ ಮಾಡಲ್ಪಟ್ಟಿರುತ್ತೆ:—

1896ನೇ ಇಸವಿಯ ದಸರಾ ಪ್ರಜಾ ಪ್ರತಿನಿಧಿಗಳ ಸಭೆಗೆ ಚುನಾಯಿಸಲ್ಪಟ್ಟ ಮೆಂಬರುಗಳ ತಖ್ತೆ.

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಮೈಸೂರು ಡಿಸ್ಟ್ರಿಕ್ಟು.	
ಮೈಸೂರ್ ಟವ್ನ್ ಮ್ಯುನಿಸಿಪಾಲಿಟಿ ..	1 ಮೆಸ್ಟರ್ ಲಕ್ಷ್ಮೀನರಸಿಹ್ಮ ಅಯ್ಯಂಗಾರ್ರು	ಅಡ್ವೋಕೇಟ್
	2 ಡಿಟೋ ಎಂ. ವೆಂಕಟಕೃಷ್ಣಯ್ಯನವರು	ಸ್ಕೂಲ್ ಮಾಸ್ಟರ್
	3 ಡಿಟೋ ಎ. ರಾಮಾಂಣನವರು	ಅಡ್ವೋಕೇಟ್
	4 ಡಿಟೋ ಹೆಚ್. ಕೃಷ್ಣರಾಯರು ...	ಡಿಟೋ
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು	1 ಡಿಟೋ ಅಂಬಳೆ ಅಂಣಯ್ಯ ಪಂಡಿತರು ..	ಜಮೀರ್ದಾರ್
	2 ಡಿಟೋ ಶಿವೇಜಿರಾಯರು ..	ಡಿಟೋ
ಫೈರ್ಬ್ರಾಕ್ಸ್ ಲೋಕಲ್ ಫಂಡ್‌ಬೋರ್ಡು	1 ಡಿಟೋ ಅಕ್ಕಿಹೆಬ್ಬಳೆ ಕೃಷ್ಣಪ್ಪನವರು ..	ಡಿಟೋ
	2 ಡಿಟೋ ವೈದ್ಯನಾಥಪುರದ ರಾಮಂಣನವರು	ಡಿಟೋ
ಮೈಸೂರ್ ತಾಲ್ಲೂಕು ..	1 ಡಿಟೋ ಕೃಷ್ಣರಾಯರು ..	ಕಂಟ್ರಾಕ್ಟರ್
	2 ಡಿಟೋ ಗೋಪಶೆಟ್ಟರು ..	ವರ್ತಕರು
	3 ಡಿಟೋ ಮಲ್ಲಿಕಾರ್ಜನಪ್ಪನವರು ..	ಇನಾಂದಾರ್
	4 ಡಿಟೋ ಮಾದಪ್ಪನವರು ..	ಡಿಟೋ
ಯಜಕೊರೆ ತಾಲ್ಲೂಕು ..	1 ಡಿಟೋ ಮಲ್ಲಿಕಾರ್ಜುನಯ್ಯನವರು ...	ಪಟೇಲ್
	2 ಡಿಟೋ ವೆಂಡರ್ ಸುಬ್ಬರಾಯರು ..	ಜಮೀರ್ದಾರ್
	3 ಡಿಟೋ ಅಂಣಾಜಯ್ಯಂಗಾರ್ರು ..	ಡಿಟೋ
	4 ಡಿಟೋ ದಾಸಶೆಟ್ಟರು ..	ವರ್ತಕರು
ಹುಣಸೂರು ತಾಲ್ಲೂಕು ...	1 ಡಿಟೋ ಚನ್ನಕೇಶವಯ್ಯ ವುರಫ್ ರಾಯಪ್ಪನವರು ..	ಜಮೀರ್ದಾರ್
	2 ಡಿಟೋ ಜಿ. ಕೃಷ್ಣಪ್ಪನವರು ..	ಪೆರ್ಷ ಸ್ಕೂಲ್ ಮಾಸ್ಟರ್
	3 ಡಿಟೋ ಪೆಟ್ರ್ ಡೇ ಸಾಹೆಬರು ..	ಗಂಧದಯಂತ್ರ ಕಾರ್ಖಾನೆ ಸ್ವಂತ ಕರ್ತರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ನರಸಿಹ್ಮಯ್ಯನವರು ..	ಜಮೀರ್ದಾರ್
ಹೆಗ್ಗಡದೇವನಕೋಟೆ ತಾಲ್ಲೂಕು ..	1 ಡಿಟೋ ರಂಗಯ್ಯಂಗಾರ್ರು ..	ಜಮೀರ್ದಾರ್ ಮತ್ತು ಕಂಟ್ರಾಕ್ಟರ್
	2 ಡಿಟೋ ಸುಬ್ಬಂಣನವರು ..	ಜಮೀರ್ದಾರ್ ಮತ್ತು ಶಾನಭೋಗ್
ಗುಂಡಲ್‌ಪೇಟೆ ತಾಲ್ಲೂಕು ..	1 ಡಿಟೋ ವಳಹಟ್ಟಿ ದೇವಪ್ಪನವರು ..	ಜಮೀರ್ದಾರ್
	2 ಡಿಟೋ ಗುರಿಕಾರ ಹೊನ್ನಪ್ಪನವರು ...	ಡಿಟೋ
ಚಾಮರಾಜನಗರ ತಾಲ್ಲೂಕು ..	1 ಡಿಟೋ ನಾಗಪ್ಪನವರು ..	ವರ್ತಕರು
	2 ಡಿಟೋ ಅಂಬಳೆ ಅಂಣಯ್ಯ ಪಂಡಿತರು ..	ಜಮೀರ್ದಾರ್
	3 ಡಿಟೋ ವಾಸುದೇವಯ್ಯದವರು ..	ಡಿಟೋ ವ ಶಾನಭೋಗ್
ನಂಜನಗೂಡು ತಾಲ್ಲೂಕು ..	1 ಡಿಟೋ ಕಲಿಯೂರು ವೆಂಕಟಸುಬ್ಬಯ್ಯನವರು ..	ಪ್ಲೀಡರು
	2 ಡಿಟೋ ಮುಸ್ತ್ಫಾ ಸಾಹೆಬರು ..	ಜವಳಿ ವರ್ತರು
	3 ಡಿಟೋ ನಾಯಿಕ್ ನರಸಿಹ್ಮಚಾರ್ರು ..	ಬ್ಯಾಂಕ್ ಪಿಜಂಟ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಶಂಕರನಾರಣಪ್ಪನವರು ..	ಜಮೀರ್ದಾರ್
ತಿರುಮಕೂಡ್ಲು ನರಸೀಪುರ ತಾಲ್ಲೂಕು ..	1 ಡಿಟೋ ಶಿದ್ದಲಿಂಗಮರದೇವರು ..	ಬ್ಯಾಂಕ್ ಪಿಜಂಟ್
	2 ಡಿಟೋ ಕೊಳ್ಳೇಗಾಲ ವೆಂಕಟಾದ್ರಿಶೆಟ್ಟು ..	ಜಮೀರ್ದಾರ್
	3 ಖಾಲಿ	
ಶ್ರೀರಂಗಪಟ್ಣ ತಾಲ್ಲೂಕು ..	1 ಮೆಸ್ಟರ್ ನರಸಿಹ್ಮಗವುಡರು ..	ಜಮೀರ್ದಾರ್
	2 ಖಾಲಿ	
	3 ಡಿಟೋ	
	4 ಮೆಸ್ಟರ್ ವೆಂಕಟಕೃಷ್ಣಪ್ಪನವರು ..	ಜಮೀರ್ದಾರ್ ಮತ್ತು ಶಾನಭೋಗ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಕರಿಮೊಹದ್ದಿ ಸಾಹೆಬರು ..	ಸ್ಕೂಲ್ ಮಾಸ್ಟರ್
ಕೃಷ್ಣರಾಜಪೇಟೆ ತಾಲ್ಲೂಕು ..	1 ಡಿಟೋ ರಂಗಯ್ಯಂಗಾರ್ರು ..	ಜಮೀರ್ದಾರ್ ವ ಪೆರ್ಷನರ್
	2 ಡಿಟೋ ಶೇತಾರಾಮಯ್ಯನವರು ..	ಡಿಟೋ ಮತ್ತು ಶಾನಭೋಗ್
	3 ಡಿಟೋ ಲಿಂಗರಾಜಗವುಡರು ..	ಜಮೀರ್ದಾರ್ ವ ಪಟೇಲ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ನಾಗಮಂಗಲ್ ತಾಲ್ಲೂಕು	1 ಮೆಸ್ಸರ್ ಚಂದ್ರಶೇಕರಯ್ಯನವರು ..	ಜಮೀನ್ದಾರ
	2 ಡಿಟೋ ಗುಂಡಪ್ಪನವರು ..	ಜಮೀನ್ದಾರ್ ಮತ್ತು ಶಾನಭೋಗ್
	3 ಡಿಟೋ ದೊಡ್ಡೇಗವುಡರು ..	ಜಮೀನ್ದಾರ್ ಮತ್ತು ಪಟೇಲ್
ಮಂಡ್ಯ ತಾಲ್ಲೂಕು	1 ಡಿಟೋ ಜಿನ್ನಪ್ಪನ ನಂಜಪ್ಪನವರು ..	ವರ್ತಕರು
	2 ಡಿಟೋ ರಾಮಣ್ಣನವರು ..	ಜಮೀನ್ದಾರ್
	3 ಡಿಟೋ ಎ. ಆನಂದಾಳ್ವಾರ್ರು ..	ಡಿಟೋ
ಮಳವಳ್ಳಿ ತಾಲ್ಲೂಕು	1 ಡಿಟೋ ಶಂಕರಪ್ಪನವರು ..	ಡಿಟೋ
	2 ಡಿಟೋ ಮಾಯಿಗವುಡರು ..	ಡಿಟೋ
ಡಿಟೋ ಮ್ಯುನಿಸಿಪಾಲಿಟಿ ..	1 ಖಾಲಿ	
ಶ್ರೀಯದುಗಿರಿಸದಾನಂದವರ್ಧನೀಸಭಾ ..	1 ಮೆಸ್ಸರ್ ತಿರುವಾಯಿವೊಳಿ ತಿರುನಾರಣಯ್ಯಂಗಾರು) ..	ಆಚಾರ್ಯರು
	ಬೆಂಗಳೂರು ಡಿಸ್ಟ್ರಿಕ್ಟು.	
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ..	1 ಮೆಸ್ಸರ್ ಡಿ. ವೆಂಕಟ್ರಾಮಯ್ಯನವರು ..	ಅಡ್ವೊಕೇಟ್
	2 ಡಿಟೋ ನಾಗಪ್ಪನವರು ..	ವರ್ತಕರು
	3 ಡಿಟೋ ಎಂ. ರುದ್ರಪ್ಪನವರು ..	ಫ್ಲವರಿಸ್ಟ್
	4 ಡಿಟೋ ಹಾಫಿಜುಲ್ಲಾಖಾನ್ ಸಾಹೆಬರು ..	ಹಕೀಂ
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು ..	1 ಡಿಟೋ ಗುರಕಾರ ತಿಮ್ಮಪ್ಪನವರು ..	ಜಮೀನ್ದಾರ್
	2 ಡಿಟೋ ಶ್ರೀಕಂಠಯ್ಯನವರು ..	ಡಿಟೋ
ಬೆಂಗಳೂರು ತಾಲ್ಲೂಕು ..	1 ಡಿಟೋ ರೆವರೆಂಡ್ ಸಿ. ಡಬ್ಲ್ಯು. ಕ್ರಿಸ್ಟಿಯನ್ ಯವರು ...	ಮಿಷನೆರಿ ಮತ್ತು ಜಮೀನ್ದಾರ್
	2 ಡಿಟೋ ಚಿತಂಬರಸಾಹುಜಿಯವರು ..	ವರ್ತಕರು
	3 ಡಿಟೋ ವೇಲುವೊದಲಿಯಾರು) ..	ಜಮೀನ್ದಾರ್
ಹೊಸಕೋಟೆ ತಾಲ್ಲೂಕು ..	1 ಡಿಟೋ ಪ್ಯಾರೇಗವುಡರ ಮುನೇಗವುಡರು ..	ಡಿಟೋ
	2 ಖಾಲಿ	
	3 ಮೆಸ್ಸರ್ ಮುಗವಳ ಭಾಸ್ಕರಯ್ಯನವರು .	ಜಮೀನ್ದಾರ್ ಮತ್ತು ಪಟೇಲ್
ಚನ್ನಪಟ್ಟಣ ಕುಲೀಸ್ಪ್ಯಾಟೆ ಸ॥ ತಾ॥ ಸೇರಿ.	1 ಡಿಟೋ ಭಾಷೂಮಿಯ್ಯಾ ಸಾಹೆಬ್ ಭಜಂತ್ರಿ.	ಜಮೀನ್ದಾರ್
	2 ಡಿಟೋ ಯಜವರ್ಮ ನರಸಿಹ್ಮಯ್ಯನವರು.	ವರ್ತಕರು ಮತ್ತು ಜಮೀನ್ದಾರ್
	3 ಡಿಟೋ ನಂಜುಂಡಗವುಡರು ..	ಪಟೇಲ್ ಮತ್ತು ಜಮೀನ್ದಾರ್
ಚನ್ನಪಟ್ಟಣದ ಮ್ಯುನಿಸಿಪಾಲಿಟಿ ..	1 ಡಿಟೋ ರಾಮಶೆಟ್ಟರು ..	ವರ್ತಕರು
ಕುಲೀಸ್ಪ್ಯಾಟೆ ಡಿಟೋ ..	1 ಡಿಟೋ ಅಹಮದುಲ್ಲಾಖಾನರು ..	ಡಿಟೋ
ಆನೇಕಲ್ ತಾಲ್ಲೂಕು ..	1 ಡಿಟೋ ರಾಮಸ್ವಾಮಯ್ಯಂಗಾರ್ರು ..	ಪಾಳ್ಯೇಗಾರ್ರ ವಕೀಲರು
	2 ಡಿಟೋ ಹುಸ್ಕೂರು ದಾಸಪ್ಪಯ್ಯಂಗಾರ್ರು,	ಶಾನಭೋಗ್
	3 ಡಿಟೋ ಎಂ. ಧಾಳಪ್ಪನವರು ..	ಡಿಟೋ
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಜಿ. ರಂಗಯ್ಯನವರು ..	ಉಪದೇಶಿಕರು
ಕಾರ್ಕಾರ್‌ಹಳ್ಳಿ ತಾಲ್ಲೂಕು ..	1 ಡಿಟೋ ಗುರಿಕಾರ್ ತಿಮ್ಮೇಗವುಡರು ..	ಜಮೀನ್ದಾರ್ ಮತ್ತು ಪಟೇಲ್
	2 ಡಿಟೋ ಶ್ರೀನಿವಾಸರಾಯರು ..	ಜಮೀನ್ದಾರ್. ಮತ್ತು ಪೆನ್ಷನರ್
	3 ಡಿಟೋ ಕೂನೂರು ರಾಮೇ ಅರಸಿನವರು ..	ಡಿಟೋ ಮತ್ತು ಪಟೇಲ್
ನೆಲಮಂಗಲ್ ತಾಲ್ಲೂಕು ..	1 ಡಿಟೋ ಜೀಗೂರು ವೀರಭದ್ರಯ್ಯನವರು ..	ವರ್ತಕರು ಮತ್ತು ಜಮೀನ್ದಾರ್
	2 ಡಿಟೋ ರಾಜದೊಡ್ಡನಂಜಯ್ಯನವರು ..	ವರ್ತಕರು
	3 ಡಿಟೋ ದೇಶಕುಲಕರಣಿ ದಾಸಪ್ಪನವರು ..	ಜೋಡಿದಾರ್
ದೇವನಹಳ್ಳಿ ತಾಲ್ಲೂಕು ..	1 ಡಿಟೋ ಬಾಲೇಪುರದ ವೆಂಕಟ್ರಾಮಯ್ಯನವರು ..	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟೋ ಅರಳೇ ಮುದ್ದಣ್ಣನವರು ..	ವರ್ತಕರು ಮತ್ತು ಜಮೀನ್ದಾರ್
	3 ಡಿಟೋ ಅರದೇಶಹಳ್ಳಿ ರಾಮಚಂದ್ರಯ್ಯನವರು	ಜೋಡಿದಾರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಶ್ರೀನಿವಾಸ ಗೋಪಾಲಾಚಾರ್ರು ..	ಜಮೀನ್ದಾರ್
ದೊಡ್ಡಬಳಾಪುರ ತಾಲ್ಲೂಕು ..	1 ಡಿಟೋ ಕರಿಗಿರಿಯಪ್ಪನವರು ..	ಶಾನಭೋಗ್ ಮತ್ತು ಜಮೀನ್ದಾರ್
	2 ಡಿಟೋ ಶ್ರೀನಿವಾಸಮೂರ್ತಿಗಳು ..	ಜಮೀನ್ದಾರ್
	3 ಡಿಟೋ ರುಮಾಲೆ ರುದ್ರಪ್ಪನವರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಸದಾಶಿವರಾಯರು ..	ಪ್ಲೀಡರ್ ಮತ್ತು ಜಮೀನ್ದಾರ್
ಮಾಗಡಿ ತಾಲ್ಲೂಕು ..	1 ಡಿಟೋ ಎಂ. ಕೆ. ಕ್ರಿಷ್ಣಮೂರ್ತಿರಾಯರು.	ಜಮೀನ್ದಾರ್
	2 ಡಿಟೋ ವೆಂಕಟರಾಮ ಶೆಟ್ಟರು ..	ವರ್ತಕರು
	3 ಡಿಟೋ ಪುಟ್ಟಣ್ಣ ಶೆಟ್ಟರು ..	ಡಿಟೋ

391

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಕೋಲಾರದ ಡಿಸ್ಟ್ರಿಕ್ಟ್.	
ಕೋಲಾರ ತಾಲ್ಲೂಕು ..	1 ಮೆಸ್ಟರ್ ಸಾಹುಕಾರ್ ಶೇಷಯ್ಯಂಗಾರು ..	ಶಾನಭೋಗ್
	2 ಡಿಟೋ ಬಸವೇಗವುಡರು ..	ಪಟೇಲ್
	3 ಡಿಟೋ ಪೊನ್ನ ಸುಬ್ಬಂಣನವರು ..	ಜಮ್ಮಿದಾರ್
	4 ಡಿಟೋ ಜೈರೇಗವುಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ . .	1 ಡಿಟೋ ಕಟ್ಟವೆಂಕಟಮುನಿಯಪ್ಪನವರು ..	ವರ್ತಕರು
	2 ಡಿಟೋ ಗುರುರಾಯರು ..	ಪ್ಲೀಡರ್
	3 ಡಿಟೋ ಮಾಲೂರು ಮಲ್ಲಪ್ಪಶೆಟ್ಟರು ..	ವರ್ತಕರು.
ಡಿಸ್ಟ್ರಿಕ್ಟ್ ಲೋಕಲ್ ಫಂಡುಬೋರ್ಡ್ ..	1 ಡಿಟೋ ಜವಳಿಸುಬ್ಬಶಾಸ್ತ್ರಿಗಳು ..	ಜೋಡಿದಾರು
	2 ಡಿಟೋ ಕಲ್ಲಹಳ್ಳಿ ರಾವೇಗವುಡರು ..	ಪಟೇಲ್
ಬವರಿಂಗ್ ಪ್ಯಾಟೆ ತಾಲ್ಲೂಕು ..	1 ಡಿಟೋ ವಕದಾಪುರ ಜಿಂಗರಡ್ಡಿಯವರು ..	ಪಟೇಲ್ ಮತ್ತು ಜಮ್ಮಿದಾರ್
	2 ಡಿಟೋ ತಿರುನಾರಾಯಣಸ್ವಾಮಿ ಮೊದಲಿಯಾರು ..	ಕಂಟ್ರಾಕ್ಟರ್
	3 ಡಿಟೋ ಸುಬ್ಬಣ್ಣನವರು ..	ಶಾನಭೋಗ್
ಮುಳಬಾಗಿಲ್ ತಾಲ್ಲೂಕು ..	1 ಡಿಟೋ ಭೀಮರಾಯರು ..	ಡಿಟೋ
	2 ಡಿಟೋ ನಾರಪ್ಪನವರು ..	ಜಮ್ಮಿದಾರ್
	3 ಡಿಟೋ ವೆಂಕಟೇಗವುಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ತೊಟ್ಲ ಪಳ್ಳಿ ಮುನಿಯಪ್ಪನವರು	ಜಮ್ಮಿದಾರ್
ಚಿಂತಾಮಣಿ ತಾಲ್ಲೂಕು ..	1 ಡಿಟೋ ಚಿನ್ನಪ್ಪನವರು ..	ಶಾನಭೋಗ್ ಮತ್ತು ಜಮ್ಮಿದಾರ್
	2 ಡಿಟೋ ಮುನಿಶಾಮಿಗವುಡರು ..	ಪಟೇಲ್ ಮತ್ತು ಜಮ್ಮಿದಾರ್
ಶ್ರೀನಿವಾಸಪುರ ಸಬ್ ತಾಲ್ಲೂಕು ..	1 ಡಿಟೋ ಸದಾಶಿವಪ್ಪನವರು ..	ಶಾನಭೋಗ್
	2 ಡಿಟೋ ಶ್ರೀಕಂಠಪ್ಪನವರು ..	ಪಟೇಲ್
ಚಿಕ್ಕಬಳ್ಳಾಪುರ ತಾಲ್ಲೂಕು ..	1 ಡಿಟೋ ನರಸಿಹ್ಮರಡ್ಡಿಯವರು ..	ಡಿಟೋ
	2 ಡಿಟೋ ಯರನೂಲ್ ನರಸಿಹ್ಮಯ್ಯನವರು ..	ವರ್ತಕರು
	3 ಡಿಟೋ ರಂಗಸಾಮಯ್ಯಂಗಾರು ..	ಪ್ಲೀಡರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಸಾಹುಕಾರ್ದೊಡ್ಡವಪನಿಯಪ್ಪನವರು ..	ವರ್ತಕರು
ಗೋರೀಬಿದನೂರು ತಾಲ್ಲೂಕು ..	1 ಖಾಲಿ ..	
	2 ಮೆಸ್ಟರ್ ಚಿಕ್ಕ ಸುಬ್ಬರಾಯಪ್ಪನವರು ..	ಶಾನಭೋಗ್
	3 ಡಿಟೋ ನಾರಾಯಣಗಡವುರು ..	ಪಟೇಲ್
ಬಾಗೇಪಲ್ಲಿ ತಾಲ್ಲೂಕು ..	1 ಡಿಟೋ ಸುಬ್ಬಪ್ಪನವರು ..	ಶಾನಭೋಗ್ ಮತ್ತು ಜಮ್ಮಿದಾ
	2 ಡಿಟೋ ವೆಂಕಟನರಸಪ್ಪನವರು ..	ಜಮ್ಮಿದಾರ್
ಗುಡಿಬಂಡೆ ಸಬ್ ತಾಲ್ಲೂಕು ..	1 ಡಿಟೋ ಬಾಚಿನ ಈರಯಪ್ಪನವರು ..	ಜಮ್ಮಿದಾರ್ ಮತ್ತು ವರ್ತಕರು
ಶಿಡ್ಲಘಟ್ಟ ತಾಲ್ಲೂಕು ..	1 ಡಿಟೋ ಗುಡಿಬಂಡೆ ಲಕ್ಷ್ಮಣರಾಯರು ..	ಶಾನಭೋಗ್
	2 ಡಿಟೋ ಮುತ್ತೂರು ವೆಂಕಟರಮಣಯ್ಯನವರು ..	ಡಿಟೋ
	3 ಡಿಟೋ ಹನುಮೇಗವುಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ರಾವೇಗವುಡರು ..	ಜಮ್ಮಿದಾರ್ ಮತ್ತು ಪಟೇಲ್
ಮಾಲೂರು ತಾಲ್ಲೂಕು ..	1 ಡಿಟೋ ಸೀತಾರಾಮಯ್ಯನವರು ..	ಶಾನುಭೋಗ್
	2 ಡಿಟೋ ವೆಂಕಟರಮಣಯ್ಯನವರು ..	ಡಿಟೋ
ಕೋಲಾರ ಗೋಲ್ಡ್‌ಫೀಲ್ಡ್ಸ್ ಮೈನಿಂಗ್ ಬೋರ್ಡ್ ...	1 ಡಿಟೋ ಥಾಮಸ್ ರಿಚರ್ಡ್ಸ್	ವೈಸ್ ಚೇರ್‌ಮ್ಯಾನ್ ಕೋಲಾರ್ ಗೋಲ್ಡ್ ಮೈನಿಂಗ್ ಬೋರ್ಡ್
	ತುಮಕೂರು ಡಿಸ್ಟ್ರಿಕ್ಟ್.	
ತುಮಕೂರು ತಾಲ್ಲೂಕು ..	1 ಡಿಟೋ ಶೇಷಭಟ್ಟರರಾಮಣ್ಣನವರು .	ಜಮ್ಮಿದಾರ್
	2 ಡಿಟೋ ಅಪ್ಪಣ್ಣ ಶೆಟ್ಟರ ಕೆಂಚಪ್ಪನವರು ..	ವರ್ತಕರು
	3 ಡಿಟೋ ಸಾಸಲು ತಿಮ್ಮೇಗವುಡರು ..	ಜಿರಾಯಿತ್‌ದಾರ್
	4 ಡಿಟೋ ಹೊನ್ನಡಿಕಿಪೆಟ್ಟಶಾಮಯ್ಯನವರು	ಜಮ್ಮಿದಾರ್
ಡಿಟೋ ಮ್ಯುನಿಸಿಪಾಲಿಟಿ ...	1 ಡಿಟೋ ವೆಂಕಟಾಚಾರ್ರು ..	ಪ್ಲೀಡರ್
	2 ಡಿಟೋ ಸಿ. ತಿರುವೆಂಗಡವೊದಲಿಯಾರು)	ಫೆರ್ಷ ಅಮಲ್‌ದಾರು)
	3 ಡಿಟೋ ಸಯ್ಯದ್‌ದಾವೂದ್‌ಸಾಹೇಬರು ..	ಫೆರ್ಷ ಬಾರ್‌ಸುಜೇದಾರು)
ಡಿಸ್ಟ್ರಿಕ್ಟ್ ಲೋಕಲ್ ಫಂಡ್ ಬೋರ್ಡ್ ..	1 ಡಿಟೋ ರಾಮದಾಸಪ್ಪನವರು ..	ಜಮ್ಮಿದಾರ್ ಮತ್ತು ಪ್ಲೀಡರ್
	2 ಡಿಟೋ ಅಗಳಿಕೃಷ್ಣಪ್ಪನವರು ..	ಜಮ್ಮಿದಾರ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಮದ್ದಗಿರಿ ತಾಲ್ಲೂಕು ..	1 ಮೆಸ್ಟರ್ ನಾಗಪ್ಪನವರು ಬಿ ಗೋಪಾಲಯ್ಯನವರು ..	ಜಮೀರ್ದಾರ್
	2 ಡಿಟೋ ವೈದ್ಯಹಳ್ಳಿ ಶಾಮಣ್ಣನವರು ..	ಡಿಟೋ
	3 ಡಿಟೋ ಶ್ರವಂಡಹಳ್ಳಿ ಚಿಕ್ಕೇಗವುಡರು ..	ಪಟೇಲ್ ಮತ್ತು ಜಿರಾಯಿತಿದಾರ್
ಕೊರಟಿಗೆರೆ ಸಬ್ ತಾಲ್ಲೂಕು ..	1 ಡಿಟೋ ಬಕ್ಕು ..	ಜಿರಾಯಿತಿದಾರ್
ಚಿಕ್ಕನಾಯಕನಹಳ್ಳಿ ತಾಲ್ಲೂಕು ..	1 ಡಿಟೋ ಪುಟ್ಟಣ್ಣನವರು ...	ಶಾನಭೋಗ್
	2 ಡಿಟೋ ನರಸಿಹ್ಮಯ್ಯನವರು ..	ಡಿಟೋ
ಹುಳಿಯಾರ್ ಸಬ್ ತಾಲ್ಲೂಕು ..	1 ಡಿಟೋ ಗಫೂರ್‌ಖಾನ್‌ಸಾಹೇಬರು ..	ಜಮೀರ್ದಾರ್
ತಿರಾ ತಾಲ್ಲೂಕು ..	1 ಡಿಟೋ ಕುಂಜಗೋನಹಳ್ಳಿಬಡೇಸಾಹೇಬರು	ಜಿರಾಯಿತಿದಾರ್
	2 ಡಿಟೋ ಪಟ್ಟಣಯಕನಹಳ್ಳಿ ಕಂಕರಚ್ಚೌಡಪ್ಪನವರು ..	ಡಿಟೋ ಮತ್ತು ವರ್ತಕರು
	3 ಡಿಟೋ ಯಲವಬಾಗೇ ಲಕ್ಷ್ಮೀನರಸೇಗವುಡರು ..	ಜಿರಾಯಿತಿದಾರ್
ಗುಬ್ಬೀ ತಾಲ್ಲೂಕು ..	1 ಡಿಟೋ ಕಡಬದ ರಾಮಾನುಜಯ್ಯಂಗಾರ್ರು	ಜಮೀರ್ದಾರ್
	2 ಡಿಟೋ ಗುಬ್ಬೀ ಮದಾರ್‌ಸಾಹೇಬರು ..	ಜಿರಾಯಿತಿದಾರ್ ಮತ್ತು ಕಂಟ್ರಾಕ್ಟರ್
	3 ಡಿಟೋ ಬಲವಟ್ಟ ಹೊನ್ನಲಿಂಗೇಗವುಡರು	ಜಮೀರ್ದಾರ್ ಮತ್ತು ಪಟೇಲ್
	4 ಡಿಟೋ ಕಡಬದ ನಂಜುಂಡಭಟ್ಟರು ..	ಜಮೀರ್ದಾರ್
ತಿಪಟೂರು ತಾಲ್ಲೂಕು ..	1 ಡಿಟೋ ರಂಗಾಪುರದ ಬಸವಲಿಂಗಯ್ಯನವರು	ಜಿರಾಯಿತಿದಾರ್
	2 ಡಿಟೋ ನೊಣವಿನಕೆರೆ ಸುಬ್ಬರಾಯರು ..	ಶಾನಭೋಗ್ ಮತ್ತು ಜಮೀರ್ದಾರ್
ತುರುವೇಕೆರೆ ಸಬ್ ತಾಲ್ಲೂಕು ..	1 ಡಿಟೋ ನಾಗಪ್ಪನವರು ..	ಪಟೇಲ್
ಪಾವಗಡ ತಾಲ್ಲೂಕು ..	1 ಡಿಟೋ ತಿರುಮಲತಾತಾಚಾರ್ರು ..	ಜಮೀರ್ದಾರ್
	2 ಡಿಟೋ ಪುಟ್ಟನಂಜರಡ್ಡಿಯವರು ..	ಪಟೇಲ್
ಕುಣಿಗಲ್ ತಾಲ್ಲೂಕು ..	1 ಡಿಟೋ ಹಿರೂರು ಗುಂಡಪ್ಪನವರು ..	ಜಮೀರ್ದಾರ್
	2 ಡಿಟೋ ರಂಗೇಗವುಡರು ..	ಪಟೇಲ್
	3 ಡಿಟೋ ಅಮೃತೂರು ಕೃಷ್ಣಯ್ಯಂಗಾರ್ರು	ಜಮೀರ್ದಾರ್

ಹಾಸನ ಡಿಸ್ಟ್ರಿಕ್ಟು.

ಆಲೂರು ಸಬ್ ತಾಲ್ಲೂಕು ದೇಖಿಲ್ ಹಾಸನ ತಾಲ್ಲೂಕು ..	1 ಡಿಟೋ ಸುಬ್ಬಪಟ್ಟರು ..	ವರ್ತಕರು
	2 ಡಿಟೋ ಸಯ್ಯದಖಾದರ್‌ಸಾಹೇಬರು ..	ಡಿಟೋ
	3 ಡಿಟೋ ಕೆ. ಶ್ರೀನಿವಾಸಮೂರ್ತಿಯವರು ...	ಜಮೀರ್ದಾರ್
	4 ಡಿಟೋ ನಾರಣಯ್ಯಂಗಾರ್ರು ..	ಜಮೀರ್ದಾರ್ ಮತ್ತು ಶಾನಭೋಗ್
ಹಾಸನ ಮ್ಯುನಿಸಿಪಾಲಿಟಿ ..	1 ಡಿಟೋ ನಾಡಿಗ ಚನ್ನಕೇಶವಯ್ಯನವರು ..	ಬ್ಯಾಂಕ್ ಪಿಜಂಟ್
	2 ಡಿಟೋ ಪಸಾರೆಧರಣಪ್ಪನವರು ..	ವರ್ತಕರು
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು ..	1 ಡಿಟೋ ಕೆಲಸಾಪುರದ ತಮ್ಮಯ್ಯನವರು ...	ಕಾಫಿ ಪ್ಲಾಂಟರ್
	2 ಡಿಟೋ ಬಾಣಾವಾರದ ವೆಂಕಟಸುಬ್ಬಯ್ಯನವರು ..	ಇನಾಂದಾರ್
ಮಂಜಿರಾಬಾದ್ ತಾಲ್ಲೂಕು ..	1 ಡಿಟೋ ವೆಂಕಟಾಚಲಶಟ್ಟರು ...	ವರ್ತಕರು
	2 ಡಿಟೋ ನರಸಿಹ್ಮಯ್ಯನವರು ...	ಶಾನಭೋಗ್
	3 ಡಿಟೋ ಮಲ್ಲೇಗವುಡರು ...	ಮೊಖ್ತೆಸರ್ ಪಟೇಲ್
	4 ಖಾಲಿ ...	
ಬೇಲೂರು ತಾಲ್ಲೂಕು ..	1 ಮೆಸ್ಟರ್ ಲಕ್ಕುಂದದ ಕೇಶವಯ್ಯಂಗಾರ್ರು	ಶಾನೆಭೋಗ್
	2 ಡಿಟೋ ಅಬ್ದುಲ್‌ರಹಿಮ್ಮಾನ್ ಸಾಹೇಬರು ..	ಕಾಫಿ ಪ್ಲಾಂಟರ್
	3 ಖಾಲಿ ..	
ಅರಸೀಕೆರೆ ತಾಲ್ಲೂಕು ..	1 ಮೆಸ್ಟರ್ ಶೀತಾರಾಮಯ್ಯನವರು ..	ಜಮೀರ್ದಾರ್ ಮತ್ತು ಶಾನಭೋಗ್
	2 ಡಿಟೋ ಕೆಂಚರಾಯಪಟ್ಟರು ..	ವರ್ತಕರು
	3 ಡಿಟೋ ದಾಸಪ್ಪನವರು ..	ಜಮೀರ್ದಾರ್ ಮತ್ತು ಶಾನಭೋಗ್
ಚನ್ನರಾಯಪಟ್ಟಣ ತಾಲ್ಲೂಕು ..	1 ಡಿಟೋ ವೆಂಕಟರಾಮಯ್ಯನವರು ..	ಶಾನಭೋಗ್
	2 ಡಿಟೋ ಕೆಂಪೇಗವುಡರು ..	ಜಮೀರ್ದಾರ್ ಮತ್ತು ಪಟೇಲ್
	3 ಡಿಟೋ ಕೃಷ್ಣಪ್ಪನವರು ..	ಜಮೀರ್ದಾರ್ ಮತ್ತು ಶಾನಭೋಗ್
ಹೊಳೇನರಸೀಪುರದ ತಾಲ್ಲೂಕು ..	1 ಡಿಟೋ ವೆಂಕಟರಾಮಯ್ಯನವರು ..	ಜಮೀರ್ದಾರ್ ಮತ್ತು ಫ್ಲೀಡರ್
	2 ಡಿಟೋ ಲಕ್ಷ್ಮೀನಾರಾಯಣಪಂಡಿತರು ..	ಜಮೀರ್ದಾರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಕೆ. ರಾಘವೇಂದ್ರಾಚಾರ್ರು ..	ಸಾಹುಕಾರ್

ಜುನಾಯಿಸಿದವರು.	ಜುನಾಯಿಸಲ್ಪಟ್ಟವರ ಹೆಸರು.	ಕಸಬು.
ಅರಕಲ್‌ಗೂಡು ತಾಲ್ಲೂಕು ..	1 ಮೆಸ್ಟರ್ ಪುಟ್ಟಸಾಮಯ್ಯನವರು ..	ಶಾನಭೋಗ್
	2 ಡಿಟೋ ಅಬ್ದುಲ್ಲಾ ಸಾಹೇಬರವರು ...	ಜಮ್ಮೀದಾರ್
	3 ಡಿಟೋ ಮಲ್ಲಪ್ಪಾಜಿ ಅರಸಿನವರು ..	ಪಟೇಲ್
ಸಾತ್ ಮೈಸೂರ್ ಯೂರೋಪಿಯರ್ ..	1 ಡಿಟೋ ಜೇ. ಜಿ. ಹ್ಯಾವಿಲ್ಬ್ಯ ಸಾಹೇಬರು	ಕಾಫಿ ಪ್ಲಾಂಟರ್
ಪ್ಲಾಂಟರ್ಸ್ ಅಸೋಸಿಯೇಷ್ ..		
ಸಾತ್ ಮೈಸೂರು ನೇಟಿವ್ ಪ್ಲಾಂಟರ್ಸ್ ..	1 ಡಿಟೋ ಉಡೇವರದ ದ್ಯಾವಪ್ಪ ಗೌಡರು ...	ಡಿಟೋ
ಅಸೋಸಿಯೇಷ್ ..		
	ಶಿವಮೊಗ್ಗ ಡಿಸ್ಟ್ರಿಕ್ಟ್.	
ಶಿವಮೊಗ್ಗ ತಾಲ್ಲೂಕು ..	1 ಮೆಸ್ಟರ್ ಹೊಸದುರ್ಗದ ಗಿರಿಯಪ್ಪನವರು	ಜಮ್ಮೀದಾರ್
	2 ಡಿಟೋ ಗೌಸ್‌ಷರೀಫ್ ಸಾಹೆಬರು ..	ಸಾಹುಕಾರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಎಚ್. ಗಿರಿಯಪ್ಪನವರು ..	ಜಮ್ಮೀದಾರ್
	2 ಡಿಟೋ ಚನ್ನಗಿರಿ ಮಲ್ಲಾರಿರಾಯರು ..	ಪ್ಲೀಡರ್
	3 ಡಿಟೋ ಜಿ. ಕೋಡಪ್ಪನವರು ..	ವರ್ತಕರು
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡು ..	1 ಡಿಟೋ ನಾಡಿಗ ತಿಮ್ಮಪ್ಪನವರು ...	ಜಮ್ಮೀದಾರ್
	2 ಡಿಟೋ ಹೊಸಬಾಳೆ ತಿಮ್ಮಪ್ಪನವರು ...	ಡಿಟೋ
ಕುಂಸಿ ಸಬ್ ತಾಲ್ಲೂಕು ..	1 ಡಿಟೋ ರಾಮಚಂದ್ರಪ್ಪನವರು ಬಿ ಹಿರ ಲಾಲಪ್ಪನವರು ..	ಡಿಟೋ
	2 ಡಿಟೋ ಸರಾಫ್ ವೆಂಕಪ್ಪನಾಯಕರು ...	ಡಿಟೋ
ಚನ್ನಗಿರಿ ತಾಲ್ಲೂಕು ..	1 ಡಿಟೋ ಸಂತೆಬೆನ್ನೂರ ಸಾಹುಕಾರ್ ಮಲ್ಲಯ್ಯನವರು	ವರ್ತಕರು
	2 ಡಿಟೋ ಮುರಳಿಸಿದ್ದಯ್ಯನವರು ಬಿ ರೇವ ಯ್ಯನವರು ..	ಜಮ್ಮೀದಾರ್
	3 ಡಿಟೋ ಕತ್ತಲಗಿರಿ ಮುರಿಗಪ್ಪಗವುಡರು ..	ಪಟೇಲ್ ಮತ್ತು ಜಮ್ಮೀದಾರ್
	4 ಡಿಟೋ ಬಳಗನೋಡಿ ಗೌಡಲಿಂಗಯ್ಯನವರು	ಡಿಟೋ
ಹೊನ್ನಾಳಿ ತಾಲ್ಲೂಕು ...	1 ಡಿಟೋ ಚಟ್ನಹಳ್ಳಿನಾಡಿಗಗೋಪಾಲಪ್ಪನವರು	ಶಾನಭೋಗ್ ಮತ್ತು ಜಮ್ಮೀದಾರ್
	2 ಡಿಟೋ ಮುಲ್ಲೂರು ನಾಡಿಗನರಸಿಂಗಪ್ಪನವರು	ಡಿಟೋ ಡಿಟೋ
	3 ಡಿಟೋ ಬೆಲಗುತ್ತಿನಾಡಿಗ ಮಲ್ಲಾರಪ್ಪನವರು	ಡಿಟೋ ಡಿಟೋ
	4 ಡಿಟೋ ಮುನಿಯಪ್ಪನ ಗುರುಬನಪ್ಪನವರು	ಜಮ್ಮೀದಾರ್ ಮತ್ತು ವರ್ತಕರು
ಶಿಕಾರಿಪುರ ತಾಲ್ಲೂಕು ..	1 ಡಿಟೋ ದೇವಪ್ಪನವರು ಬಿ ರಂಗಭಟ್ಟರು	ಪಟೇಲ್ ಮತ್ತು ಜಮ್ಮೀದಾರ್
	2 ಡಿಟೋ ರಂಗಪ್ಪನವರು ಬಿ ಹುಚ್ಚರಾಯರು	ಜಮ್ಮೀದಾರ್ ಮತ್ತು ಶಾನಭೋಗ್
	3 ಡಿಟೋ ರಮಣೇ ಬಸಪ್ಪನವರು ..	ವರ್ತಕರು
	4 ಡಿಟೋ ಅಂಟೆಕೊಪ್ಪದ ಬಸಪ್ಪನವರು ...	ಡಿಟೋ
ಡಿಟೋ ಮ್ಯುನಿಸಿಪ್ಯಾಲಿಟಿ ..	1 ಡಿಟೋ ಎಸ್. ರಾಮರಾಯರು ...	ಜಮ್ಮೀದಾರ್
ಸೊರಬ ತಾಲ್ಲೂಕು .	1 ಡಿಟೋ ಹೆಗ್ಗಡೆ ರಾಮಪ್ಪನವರು ಬಿ ಪುಟ್ಟಪ್ಪನವರು ...	ಪಟೇಲ್ ಮತ್ತು ಜಮ್ಮೀದಾರ್
	2 ಡಿಟೋ ಕೆರೇಹಳ್ಳಿ ನಾಡಿಗ ಶಿವಪ್ಪನವರು ಬಿ ವಿರೂಪಾಕ್ಷಪ್ಪನವರು ..	ಶಾನಭೋಗ್ ಮತ್ತು ಜಮ್ಮೀದಾರ್
	3 ಡಿಟೋ ಕ್ಯಾಸರಗುಪ್ಪೆ ಶಿವಯ್ಯನವರು ಬಿ ಭಂಡಯ್ಯನವರು ..	ಪಟೇಲ್ ಮತ್ತು ಜಮ್ಮೀದಾರ್
	4 ಡಿಟೋ ತ್ಯಾವಗೋಡ್ ಶಿವಯ್ಯನವರು ಬಿ ಕೊಟ್ಟುರಯ್ಯನವರು ..	ಡಿಟೋ ಡಿಟೋ
ಸಾಗರ ತಾಲ್ಲೂಕು ..	1 ಡಿಟೋ ಬಿಳಿ ಕೃಷ್ಣಪ್ಪನವರು ಬಿ ದ್ಯಾವ ಪ್ಪನವರು ..	ಜಮ್ಮೀದಾರ್
	2 ಡಿಟೋ ಕಾಗೋಡು ಗುರುವಯ್ಯಗವುಡರು ಬಿ ಗುರುವಯ್ಯನವರು ..	ಡಿಟೋ
	3 ಖಾಲಿ.	
	4 ಮೆಸ್ಟರ್ ಕೇಲಡಿ ಮಹಾಂತಯ್ಯನವರು ಉರಫ್ ಫಕೀರಯ್ಯನವರು ...	ಹಿರೇಮಠದ ಯೇಜಂಟ್
ನಗರ ತಾಲ್ಲೂಕು ..	1 ಡಿಟೋ ಹೆಬ್ಬಯಲು ಲಿಂಗಪ್ಪನವರು ..	ಶಾನಭೋಗ್ ಮತ್ತು ಜಮ್ಮೀದಾರ್
	2 ಡಿಟೋ ಮುಂಜೆವುಡುಪರು ..	ಜಮ್ಮೀದಾರ್ ಮತ್ತು ವರ್ತಕರು
	3 ಡಿಟೋ ಚಂದ್ರಯ್ಯನ ನಾಗಪ್ಪನವರು ..	ಡಿಟೋ ಡಿಟೋ
	4 ಡಿಟೋ ನಾಗೇಂದ್ರಭಟ್ಟರು	ವರ್ತಕರು
ತೀರ್ಥಹಳ್ಳಿ ತಾಲ್ಲೂಕು ..	1 ಡಿಟೋ ಕುಲುಂದೆ ತಿಮ್ಮಣ್ಣಗವುಡರು ..	ಜಮ್ಮೀದಾರ್
	2 ಡಿಟೋ ಹಂದಲಸದ ಸುಬ್ಬಣ್ಣನವರು ..	ಜಮ್ಮೀದಾರ್ ಮತ್ತು ಕಂಟ್ರಾಕ್ಟರ್
	3 ಡಿಟೋ ಆಡಿವಪ್ಪನವರು ಬಿ ಕೊಟ್ರಪ್ಪನ ವರು ..	ಸಾಹುಕಾರ್
	4 ಡಿಟೋ ಜವಳಿ ವಿಠಲಯ್ಯನವರು ...	ವರ್ತಕರು
ನಗರ ಸಭಾ ..	1 ಡಿಟೋ ಎಸ್. ಆನಂದರಾಯರು, ಬಿ. ಏ., ಬಿ. ಎಲ್. ..	ಅಡ್ವೋಕೇಟ್

394

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಕಡೂರು ಡಿಸ್ಟ್ರಿಕ್ಟ್.	
ಚಿಕ್ಕಮಗಳೂರು ತಾಲ್ಲೂಕು ..	1 ಮೆಸ್ಟರ್ ಸಿ. ಶ್ರೀನಿವಾಸರಾಯರು ..	ಕಾಫಿ ಪ್ಲಾಂಟರ್
	2 ಡಿಟೋ ಸಿ. ವಾಸುದೇವರಾಯರು ...	ಡಿಟೋ
	3 ಡಿಟೋ ವಿರತ್ತೇಗವ್ವಡರು ..	ಹೊಟೇಲ್ ಮತ್ತು ಡಿಟೋ
	4 ಡಿಟೋ ಪುಟ್ಟಣ್ಣಶೆಟ್ಟರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಬಿ. ಗುಂಡಪ್ಪನವರು ..	ಪ್ಲೀಡರ್
	2 ಡಿಟೋ ಗಂಜಾಂಅಬ್ದುಲ್‌ಖಾದರ್ ಸಾಹೆಬರು	ಕಾಫಿ ಪ್ಲಾಂಟರ್
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡ್ ..	1 ಡಿಟೋ ಗುಂಡಪ್ಪನವರು ...	ಪ್ಲೀಡರ್ ಮತ್ತು ಇನಾಂದಾರ್
	2 ಡಿಟೋ ಕುಪ್ಪುಸಾಮಿಪಿಳ್ಳೈಯವರು ..	ಕಾಫಿ ಪ್ಲಾಂಟರ್
ತರೀಕೆರೆ ತಾಲ್ಲೂಕು ..	1 ಡಿಟೋ ಅತ್ತಿಗನಾಳ್ ಶಾಮಂಣನವರು ..	ಡಿಟೋ
	2 ಡಿಟೋ ಕುಪ್ಪುಸಾಮಿಪಿಳ್ಳೈಯವರು ..	ಡಿಟೋ
	3 ಡಿಟೋ ಹಿರೆಕತೂರ್ ನರಸಪ್ಪನವರು ..	ಶಾನಭೋಗ್
	4 ಡಿಟೋ ಬೀರನಹಳ್ಳಿ ಬಸವೇಗವ್ವಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಗೊಟ್ಟೂರು ವೆಂಕಟಸುಬ್ಬಯ್ಯನವರು ..	ವರ್ತಕರು
ಕೊಪ್ಪದ ತಾಲ್ಲೂಕು ..	1 ಡಿಟೋ ಕಿಗ್ಗದ ವಿಶ್ವೇಶ್ವರಯ್ಯನವರು ..	ಜಮೀರ್ದಾರ್
	2 ಡಿಟೋ ಹೆಡಸೆ ಸೀತಾರಾಮಶಾಸ್ತ್ರಿಗಳು ...	ಡಿಟೋ
	3 ಡಿಟೋ ಹರಿಹರಪುರದ ರಂಗಣ್ಣ ಉಪಾಧ್ಯರು	ಜಮೀರ್ದಾರ್ ಮತ್ತು ಸಾಹುಕಾರ್
ಎಡೆಹಳ್ಳಿ ಸಬ್ ತಾಲ್ಲೂಕು ..	1 ಡಿಟೋ ತರೀಕೆರೆ ಶ್ರೀನಿವಾಸರಾಯರು ..	ಜಮೀರ್ದಾರ್
ಕಡೂರು ತಾಲ್ಲೂಕು ..	1 ಡಿಟೋ ಪತ್ರೇ ರುದ್ರಪ್ಪನವರು ..	ಸಾಹುಕಾರ್
	2 ಡಿಟೋ ಪಟ್ಟಗರೆ ರಂಗಣ್ಣನವರು ...	ಜಮೀರ್ದಾರ್
	3 ಡಿಟೋ ಆನೆವಟ್ಟಿ ರಂಗರಾಯರು ..	ಡಿಟೋ
ಮೂಡಿಗೆರೆ ತಾಲ್ಲೂಕು ..	1 ಡಿಟೋ ಹೊರನಾಡಿ ಪುಟ್ಟಣ್ಣಶೆಟ್ಟರು ..	ಪಟೇಲ್
	2 ಡಿಟೋ ಶಾಂತರಾಜಯ್ಯ ಹಗ್ಗಡೆಯವರು ..	ಜಮೀರ್ದಾರ್
	3 ಡಿಟೋ ಕೊಟ್ಯಕೆರೆ ಸೋಮೇಗವ್ವಡರು ..	ಪಟೇಲ್
	4 ಡಿಟೋ ಹೆಸಗಲ್ ಪಟೇಲ್ ಪಟ್ಟದ ಸಿದ್ದಲಿಂಗಯ್ಯನವರು ..	ಡಿಟೋ
ನಾರ್ತ್ ಮೈಸೂರು ಯೂರೋಪಿಯರ್ ಪ್ಲಾಂಟರ್ಸ್ ಅಸೋಸಿಯೇಷ್ ..	1 ಡಿಟೋ ಸಿ. ಎಚ್. ಗಾಡ್‌ಫ್ರೆ ಸಾಹೇಬರು ..	ಕಾಫಿ ಪ್ಲಾಂಟರ್
	1 ಡಿಟೋ ವಸ್ತಾರದ ಶಾಮರಾಯರು ...	ಡಿಟೋ
ನಾರ್ತ್ ಮೈಸೂರು ನೇಟಿವ್ ಪ್ಲಾಂಟರ್ಸ್ ಅಸೋಸಿಯೇಷ್ ..		
	ಚಿತ್ರದುರ್ಗದ ಡಿಸ್ಟ್ರಿಕ್ಟ್.	
ಚಿತ್ರದುರ್ಗ ತಾಲ್ಲೂಕು ...	1 ಮೆಸ್ಟರ್ ಕಾಶಿ ನರಸಿಕ್ಯಯ್ಯನವರು ..	ವರ್ತಕರು
	2 ಡಿಟೋ ಬಲಾಕಡಪ್ಪನವರು ..	ಡಿಟೋ
	3 ಡಿಟೋ ಮಾರಘಟ್ಟ ಬಸಪ್ಪನವರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಲಿಂಗಪ್ಪನವರು ..	ಮುರಗಿಮಠದ ಪಾರುಪತ್ತೇಗಾರ್ರು
	2 ಡಿಟೋ ಮಹಲಿಂಗಪ್ಪನವರು ..	ಶೆಟ್ಟರು
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡ್ ..	1 ಡಿಟೋ ಕ್ಯಾಸಪುರದ ರಾಮಂಣನವರು ..	ಶಾನಭೋಗ್
	2 ಡಿಟೋ ನಾಡಿಗ ಸಿದ್ದರಾವುಪ್ಪನವರು ..	ಪಟೇಲ್
ಚಳ್ಳಕೆರೆ ತಾಲ್ಲೂಕು ..	1 ಡಿಟೋ ಗುರುರಾಜಪ್ಪನವರು ..	ಶಾನಭೋಗ್
	2 ಡಿಟೋ ಸುಬ್ಬಂಣನವರು ..	ಡಿಟೋ
	3 ಡಿಟೋ ಚನ್ನಪ್ಪಯ್ಯನವರು ..	ಜಮೀರ್ದಾರ್
ಹಿರಿಯೂರು ತಾಲ್ಲೂಕು ..	1 ಡಿಟೋ ಭೀಮರಾಯರು ..	ಕಂಟ್ರಾಕ್ಟರ್
	2 ಡಿಟೋ ದೊಡ್ಡಕಿಟ್ಟದಹಳ್ಳಿ ಕರಿಯಣ್ಣನವರು	ಜಮೀರ್ದಾರ್ರು
ಹೊಳಲ್‌ಕೆರೆ ತಾಲ್ಲೂಕು ..	1 ಡಿಟೋ ಗುಂಡೇರಿ ಗೋಪಾಲಯ್ಯನವರು ..	ಶಾನಭೋಗ್
	2 ಡಿಟೋ ತಾಳ್ಯ ಕೇಶವಪ್ಪನವರು ..	ಡಿಟೋ ಮತ್ತು ಜಮೀರ್ದಾರ್ರು
ಹೊಸದುರ್ಗ ಸಬ್ ತಾಲ್ಲೂಕು ..	1 ಡಿಟೋ ಗುಂಡೇರಿ ಮಲ್ಲಯ್ಯನವರು ..	ಜಮೀರ್ದಾರ್
ದಾವಣಗೆರೆ ತಾಲ್ಲೂಕು ..	1 ಡಿಟೋ ಹೊಲೆಯನವರ ರುದ್ರಪ್ಪನವರು	ಜಮೀರ್ದಾರ್ ಮತ್ತು ವರ್ತಕರು
	2 ಡಿಟೋ ಹೊಸೂರ್ ನಂಜುಂಡರಾಯರು ..	ಜಮೀರ್ದಾರ್
	3 ಡಿಟೋ ಅಂದನೂರ್ ಶಿವಲಿಂಗಪ್ಪನವರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಮಗನಹಳ್ಳಿ ಪಡಪ್ಪರಪ್ಪನವರು ..	ಡಿಟೋ
ಹರಿಹರ ಸಬ್ ತಾಲ್ಲೂಕು ..	1 ಡಿಟೋ ಬಾಲಕೃಷ್ಣರಾಯರು ..	ಶಾನಭೋಗ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಅಡಿವಪ್ಪನವರು ..	ವರ್ತಕರು
ಜಗಳೂರು ತಾಲ್ಲೂಕು ..	1 ಡಿಟೋ ನರಸಿಂಗಪ್ಪನವರು ..	ಶಾನಭೋಗ್
	2 ಡಿಟೋ ದೇವಕೆರೆ ಗುರುಶಾಂತಪ್ಪನವರು ...	ಜಮೀರ್ದಾರ್ರು
ಹೊಳಕಾಲುಮುರು ತಾಲ್ಲೂಕು ...	1 ಡಿಟೋ ಜಿಂಕ ತಿಪ್ಪಯ್ಯನವರು ...	ದೇವಾಂಗದವರು
	2 ಡಿಟೋ ಕಾಟಪ್ಪನಾಯಕರು ...	ಜಮೀರ್ದಾರ್

395

ತಾ॥ 21ನೇ ಸೆಪ್ಟಂಬರ್ 1896.

ನಂ. 3938.—ಜು. 410, ಅಷ್ಟಗ್ರಾಮದ ಡಿಸ್ಟ್ರಿಕ್ಟ್ ವ ಸೆಷನ್ಸ್ ಜಡ್ಜ್ ಮೆ॥ ಸಿ. ಕೈಸ್‌ಯವರು ಕೆಲಸಕ್ಕಾಗಿ ರಿಪೋರ್ಟು ಮಾಡಿರುವದರಿಂದ, ಅವರಿಗೆ 1895ನೇ ಮಾರ್ಚ್ 18ನೇ ಮುಕ್ತಂ 15246 ಜು. 916ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಟ್ಟಿದ್ದ ಫರ್ಲೋ ರಜಾದ ಪೈಕಿ ಉಪಯೋಗಿಸಿಕೊಳ್ಳದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

2. ಮೆ॥ ಸಿ ಕೈಸ್‌ಯವರು, ಹಾಲಿ ಮೈಸೂರು ಸಬಾರ್ಡಿನೇಟ್ ಜಜ್ಜಿಗಾಗಿ ವಾಪಸು ಬರುವ ಮೆ॥ ಎಸ್. ಆರ್. ಸುಬ್ಬಾಯ ಅಯ್ಯರ್ ಯವರಿಗೆ ಬದಲಾಗಿ, ಅಷ್ಟಗ್ರಾಮದ ಅಡಿಷನಲ್ ಸೆಷನ್ಸ್ ಜಡ್ಜ್‌ಗಾಗಿ ಮೊಕರರ್ರಾಮಡಲ್ಪಟ್ಟಿರುತ್ತಾರೆ.

3. ಮೈಸೂರು ಆಕ್ಟಿಂಗ್ ಸಬಾರ್ಡಿನೇಟ್ ಜಡ್ಜರಾದ ಮೆ॥ ಬಿ. ಸಿಂಗ್ರಾಚಾರ್ಯು ಮೆ॥ ಎಂ. ರಾಮಸ್ವಾಮಿ ಅಯ್ಯರ್‌ಯವರ ಸ್ಥಳಕ್ಕೆ ಹಾಜರಿಯಲ್ಲಿಯಾವತ್ತೊಂದು ಹುಕುಂ ಕೊಡುವ ಪರಿಯಂತ ತಾತ್ಕಾಲಿಕವಾಗಿ ಸಬಾರ್ಡಿನೇಟ್ ಜಡ್ಜರಾಗಿ ಆಕ್ಟಿಂಗ್ ತರೀಕೆ ಇರತಕ್ಕದ್ದು. (ಮೆ॥ ಎಸ್. ಆರ್. ಸುಬ್ಬಾಯ ಅಯ್ಯರ್ ಯವರಿಗೆ ಚಾರ್ಜ್ ಒಪ್ಪಿಸಿದ ತರುವಾಯ ಕೊಡ್ಲಿ ಕೆಲಸದ ಮೇಲೆ ಹೋಗಿ ಕೇರತಕ್ಕದ್ದು.)

ತಾರೀಖು ನೇ ಸೆಪ್ಟಂಬರ್ 1896.

ನಂ. 4005.—ಲೋ. ಫಂ. 197—92, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಷಹರ್ ಮ್ಯುನಿಸಿಪಲ್ ಕಮಿಷನರ್ ಪ್ರೆಸಿಡೆಂಟ್ ಮೆ॥ ಟಿ. ಟಿ. ಲೆನಾರ್ಡ್‌ಯವರಿಗೆ, ಮೂಹಿ ಮಜಕೂರು 23ನೇ ತಾರೀಖಿನಲ್ಲಿ ಮೊಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾ॥ 23ನೇ ಸೆಪ್ಟಂಬರ್ 1896.

ನಂ. 4111.—ಮಿ. 844, ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜಿಯರ್ ವ ಸ್ಯಾನಿಟೆರಿ ಕಮ್ಮಿಷನರ್‌ಯವರ ಚೀಫ್ ಅಸಿಸ್ಟೆಂಟ್ ಉದ್ಯೋಗದ ಚಾರ್ಜನ್ನು 1896ನೇ ಸೆಪ್ಟಂಬರ್ ಗುರ್ರೇ ತಾರೀಖಿನ ಪೂರ್ವಾನ್ಹದಲ್ಲಿ ಅಸಿಸ್ಟೆಂಟ್ ಸರ್ಜಿಯರ್ ಮೆ॥ ಜಿ. ಎಲ್. ಲಕ್ಷ್ಮಣಸ್ವಾಮಿಯವರಿಂದ ಅಸಿಸ್ಟೆಂಟ್ ಸರ್ಜಿಯರ್ ಮೆ॥ ಎಸ್. ವಿ. ರಾಮಸ್ವಾಮಯ್ಯಂಗಾರ್ರವರು ತೆಗೆದುಕೊಂಡಿರುತ್ತಾರೆ.

ನಂ. 4112.—ಮಿ. 843, ಸ್ 1896ನೇ ಸೆಪ್ಟಂಬರ್ 7ನೇ ಮುಕ್ತಮಿನ ಮಧ್ಯಾನ್ಹಾತ್ಪರ ಹಾಸನ ಡಿಸ್ಟ್ರಿಕ್ಟಿನ ಮೆಡಿಕಲ್ ಚಾರ್ಜನ್ನು ಮೆ॥ ಎಸ್. ಕೆ. ಹನುಮಂತರಾಯರಿಂದ ಅಸಿಸ್ಟೆಂಟ್ ಸರ್ಜಿಯರ್ ಮೆ॥ ಜಿ. ಎಲ್. ಲಕ್ಷ್ಮಣಸ್ವಾಮಿಯವರು ತೆಗೆದುಕೊಂಡಿರುತ್ತಾರೆ.

ನಂ. 4126.—ಲೋ. ಫಂ 65.—96, ಸ್ 1894ನೇ ಇಸವಿಯ ಮೈಸೂರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಇದರಡಿ ಕಂಡ ಜಮೀನ್ ಸರ್ಕಾರಿ ಕೆಲಸಕ್ಕೆ ಅಂದರೆ, ಗುಂಡ್ಲು ಪೇಟೆ ಟವನಿನಲ್ಲಿ ಕುರುಬರ ಬೀದೀ ಸಮೀಪ ಮೊಂದು ರಸ್ತೆಯನ್ನು ವಿಸ್ತರಿಸುವ ಬಗ್ಯಾಗಿ ಬೇಕಾಗಿರುತ್ತೆ :—

ಡಿಸ್ಟ್ರಿಕ್ಟು—ಮೈಸೂರು ತಾಲ್ಲೂಕು—ಗುಂಡ್ಲು ಪೇಟೆ ಹೋಬ್ಳಿ—ಕಸಬಾ ಗ್ರಾಮ—ಗುಂಡ್ಲು ಪೇಟೆ ಟೌನ್	ಅನುಭವದಾರ—ಗಾಣಿಗರ ಪುಟ್ಟಕಟ್ಟು. ಸರ್ವೇನಂ.—ಮುನಿಸಿಪಲ್ ಸರಹದ್ದಿನಲ್ಲಿರುವ ಜಮೀನ್. ವಿಸ್ತೀರ್ಣ—ಪೂರ್ವ ಪಶ್ಚಿಮ 30 ಗಜಗಳು. ಉತ್ತರ ದಕ್ಷಿಣ—105 ಚದುರ ಗಜಗಳು. ಬೇರೀಜು—ಇಲ್ಲ.	ಚಕ್ಕುಬಂದಿ— ಉತ್ತರಕ್ಕೆ—ಕುರುಬರಕೆರೆ ರಸ್ತೆ ದಕ್ಷಿಣಕ್ಕೆ—ನೀಲಗಿರೀ ರಸ್ತೆ ಪಶ್ಚಿಮಕ್ಕೆ—ದೊಡ್ಡಮಾದಶೆಟ್ಟಿ ಮನೆ ಪೂರ್ವಕ್ಕೆ—ಮಾದಶೆಟ್ಟರ ಅಂಗಡಿ, ಬಾವಿ ವಗೈರೆ

ತಾರೀಖು 24ನೇ ಸೆಪ್ಟಂಬರ್ 1896.

ನಂ. 4174.—ಜು. 432, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ತುಮಕೂರು ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಮಹಮ್ಮದ್ ರಜಾಯವರು 2ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 4176.—ಜು. 434, ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸ್ ಸೂಪರಿಂಟೆಂಡೆಂಟ್ ಮೆಸ್ಟರ್ ಡಿ. ದೇವರಾಜ ಅರಸಿನವರಿಗೆ 1896ನೇ ಆಗಸ್ಟ್ 1ನೇ ಮುಕ್ತಂ 1725.—ಜು. 179ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ತಲಬಿಲ್ಲದ ರಜಾ 1896ನೇ ಆಗಸ್ಟ್ 3ನೇ ಮುಕ್ತಂ 1796.—ಜು. 197ನೇ ನಂಬರ ಇಸ್ತಿಹಾರ್‌ನಾಮೆಯಿಂದ 1896ನೇ ಸೆಪ್ಟಂಬರ್ 15ನೇ ತಾರೀಖಿನವರಿಗೆ ಜಾಸ್ತೀ ಮಾಡಿದ್ದದ್ದು ಪುನಹ ಹತ್ತು ದಿನಗಳ ವರಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

2. ಮೆಸ್ಟರ್ ಡಿ. ಪಿ. ಬಲ್ಲಾರ್ಡ್‌ಯವರು ಮೆಸ್ಟರ್ ಡಿ ದೇವರಾಜ ಅರಸಿನವರು ರಜಾದಮೇಲಿರುವ ಕಾಲದಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಪೊಲೀಸಿನ ಚಾರ್ಜಿನಲ್ಲಿರತಕ್ಕದ್ದು.

ನಂ. 4178.—ಜು. 436, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಫೈಂಬ್ರಾಕ್ಸ್ ಸಬ್ ಡಿವಿಜನ್ ಪೊಲೀಸಿನ ಸೂಪರಿಂಟೆಂಡೆಂಟ್ ಮೆಸ್ಟರ್ ಎಂ. ನಂಜರಾಜ ಅರಸಿನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ್ತು ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 4180.—ಜು. 438, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ ಸಿಟಿ ಮಾಜಿಸ್ಟ್ರೇಟರಾದ ಮೆಸ್ಟರ್ ಪಿ. ಆರ್. ಡಬ್ಲ್ಯೂ. ವೆದರಾಲ್ ಯವರಿಗೆ, 1896ನೇ ಸೆಪ್ಟಂಬರ್ 12ನೇ ತಾರೀಖಿನಲ್ಲಿ ಮೊಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

396

ತಾರೀಖು 26ನೇ ಸೆಪ್ಟಂಬರ್ 1896.

ನಂ. 4260.—ಲೋ. ಫಂ. 372.—92, ಇದರಡಿಕಂಡ ದೊಡ್ಡಮನುಷ್ಯರುಗಳು ಚಿತ್ರದುರ್ಗ ಡಿಸ್ಟ್ರಿಕ್ಟ್ಸು ಹೊಳಲಕೆರೇ ತಾಲ್ಲೂಕಿನಲ್ಲಿರುವ ಬಾಗೂರಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಮ್ಯುನಿಸಿಪಾಲಿಟಿಯ ಮೆಂಬರುಗಳಾಗಿ ಮೊಕರರಿ ಮಾಡಲ್ಪಟ್ಟಿರುತ್ತಾರೆ:—

ಯಕ್ಸ್ ಆಫಿಷಿಯೋ ಮೆಂಬರ್.

1. ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ರು, ಫೈಸ್ ಪ್ರೆಸಿಡೆಂಟರು.
2. ಪಬ್ಲಿಕ್‌ವರ್ಕ್ಸ್ ಇಲಾಖಾ ಸಬ್ ಡಿವಿಜ್ಞ ಆಫಿಸರರು, ಮೆಂಬರ್.

ನಾ॥ ಆಫಿಷಿಯಲ್ ಮೆಂಬರುಗಳು.

1. ಮೆಸ್ಸರ್ ದಾಸಪ್ಪನವರು, ಶಾನಭೋಗರು.
2. ,, ನಿರ್ಗುಂದದ ಸುಬ್ಬಣ್ಣನವರು, ವರ್ತಕರು.
3. ,, ಹುಸೇಕ್ ಸಾಹೆಬರು, ಖಾಜಿಯವರು.
4. ಮೆಸ್ಸರ್ ಕಟ್ಟರ ಶಿದ್ದಪ್ಪನವರು, ವರ್ತಕರು.
5. ,, ನಾಡಿಗ ದುಗ್ಗಪ್ಪಯ್ಯನವರು, ಶಾನಭೋಗರು.

ತಾರೀಖು 28ನೇ ಸೆಪ್ಟಂಬರ್ 1896.

ನಂ. 4345.—ಲೋ. ಫಂ. 273.—92, ಪಟೇಲ್ ಮೌ॥ ವೆಂಕಟರಾಯರು ರಾಜೀನಾಮೆ ಕೊಟ್ಟ ಮೇಲೆ ಗೋಪಾಲ ಕೃಷ್ಣಶೆಟ್ಟಿಯವರ ಸ್ಥಾನದಲ್ಲಿ ಹೆಗ್ಗಡದೇವನಕೋಟೆ ಮ್ಯುನಿಸಿಪಾಲಿಟಿಯ ಮೆಂಬರಾಗಿ ಮೊಕರರ್ರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 10ನೇ ಸೆಪ್ಟಂಬರ್ 1896.

ನಂ. 2816.—ರೆ. 1019, ಸ್ ೧೮೯೦ನೇ ಜುಲೈ 22ನೇ ಮಕ್ಕಂ 150ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಫಾಯಿಷ್ ಮೊಡಲ್ಪಟ್ಟ ಲ್ಯಾಂಡ್ ರೆವಿನ್ಯೂ ಕೋಡಿನ ರೂಲುಗಳ XXX A.ನೇ ರೂಲಿನಂತೆ ಈ ಕೆಳಗೆ ಕಂಡದ್ದನ್ನು ಓದತಕ್ಕದ್ದೆಂದು ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

"XXX A. ಅಮಲ್ದಾರ್ರುಗಳು ವ ಡೆಪ್ಯುಟಿ ಅಮಲ್ದಾರ್ರುಗಳು ನಿವೇಶನಗಳ ಕ್ರಯಗಳನ್ನು ನದರೀ ಮೊಬಲಗು 10 ರೂಪಾಯಿಗಳಿಗೆ ಮಿಾರದಿದ್ದರೆ ಅಪ್ಪೀಲ್ ಯಾ ಪುನರ್ವಿಮರ್ಶೆಗೆ ಹೊಳಪಟ್ಟು ಖಾಯಂ ಮಾಡಬಹುದು, ಪರಂತು ಬಹಿರಂಗವಾದ ಹರಾಜಿಗೆ ಬದಲಾಗಿ ಸರ್ಕಾರ್ ಸವಾಲಿಗೆ ಕೊಡಬೇಕಾಗಿ ಉದ್ದೇಶಿಸಲ್ಪಟ್ಟ ನಿವೇಶನಗಳ ದರೋಬಸ್ತು ಸಂಗತಿಗಳೂ ಡೆಪ್ಯುಟಿ ಕಮ್ಮಿಷನರವರ ಹುಕುಂ ಬಗ್ಯಾಗಿ ರಿಪೋರ್ಟು ಮಾಡಲ್ಪಡತಕ್ಕದ್ದು."

(ಲ್ಯಾಂಡ್ ರೆವಿನ್ಯೂ ಕೋಡಿನ 135ನೇ ಸೆಕ್ಷನ್.)
ಕಟ್ಟಡ ನಿವೇಶನಗಳನ್ನ ಕೊಡುವ ವಿಷಯದಲ್ಲಿ ಅಮಲ್ದಾರ್ರು ವ ಡೆಪ್ಯುಟಿ ಅಮಲ್ದಾರ್ರುಗಳ ಅಧಿಕಾರಗಳು.

ತಾರೀಖು 14ನೇ ಸೆಪ್ಟಂಬರ್ 1896.

ನಂ. 2893.—ರೆ. ಫೈ. 33.—96, ಬೆಂಗಳೂರು ಡಿಸ್ಟ್ರಿಕ್ಟ್ಸು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಶ್ರೀನಿವಾಸರಾಯರಿಗೆ, 1896ನೇ ಸೆಪ್ಟಂಬರ್ 5ನೇ ಮಕ್ಕಂ 2558.—ರೆ. ಫೈ. 33.—96ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಒಂದು ತಿಂಗಳ ಪ್ರಿವಿಲೀಜ್ ರಜಾ ಮತ್ತೊಂದು ತಿಂಗಳು ಜಾಸ್ತೀ ಮಾಡಲ್ಪಟ್ಟಿರುತ್ತೆ.

ನಂ. 2896.—ರೆ. ಫೈ. 49.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟ್ಸು ಮಳವಳ್ಳಿ ತಾಲ್ಲೂಕಿನ ಅಮಲ್ದಾರ್ ಕೃಷ್ಣೇ ಅರಸಿನವರಿಗೆ, 1896ನೇ ಸೆಪ್ಟಂಬರ್ 5ನೇ ಮಕ್ಕಂ ಮಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 21ನೇ ಸೆಪ್ಟಂಬರ್ 1896.

ನಂ. 3073.—ರೆ. 1092, ಚಿಕ್ಕಬಳ್ಳಾಪುರದ ಸಬ್ ಡಿವಿಜ್ಞ ಆಫಿಸರ್ ಮೆಸ್ಸರ್ ಬಿ. ಜಿ. ಕೃಷ್ಣಯ್ಯಂಗಾರ್ರು ಹಾಸನ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ಸು ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ರ್ಮಾಡಲ್ಪಟ್ಟಿರುತ್ತಾರೆ. (ಕೂಡ್ಲೆ ಕೆಲಸದ ಮೇಲೆ ಹೋಗಿ ಶೀರತಕ್ಕದ್ದು.)

ನಂ. 3136.—ಫಾ. ಫೈ. 103.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಮೈಸೂರ್ ಬೆಡ್ಡಾಗಳ ಸೂಪರ್‌ಟೆಂಡೆಂಟ್ ಮೆಸ್ಸರ್ ಕೆ. ಶಾಮಯ್ಯಂಗಾರ್ರಿಗೆ 1896ನೇ ಅಕ್ಟೋಬರ್ ಗಯೆಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಯಿತರ ತಾರೀಖಿನಾರಭ್ಯ ಹತ್ತು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 3221.—ರೆ. 1121, ಸಿಡ್ಲಘಟ್ಟ ತಾಲ್ಲೂಕಿನ ಅಮಲ್ದಾರ್ ಸಿರಾ ಶ್ರೀನಿವಾಸರಾಯರಿಗೆ, ಈ ಬಾಜುದಲ್ಲಿ ಕಂಡ ಇಸ್ತಿಹಾರ್ ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ನಾಲ್ಕು ತಿಂಗಳ ಸ್ವಂತ ಕೆಲಸಗಳ ಮೇಲಿನ ರಜಾವನ್ನು 1896ನೇ ಮಾರ್ಚಿ 18ನೇ ತಾರೀಖು ಲಾಗಾಯತು ಉಪಯೋಗಿಸಿಕೊಂಡು 1896ನೇ ಜುಲೈ 15ನೇ ಮಕ್ಕಮಿನ ಪ್ರಾಕೃಕಾಲದಲ್ಲಿ ಕೆಲಸಕ್ಕೆ ವಾಪಸು ಬಂದ ಸಟಖು ಉಪಯೋಗಿಸಿಕೊಳ್ಳದ ರಜಾ ಭಾಗ ಅಂದರೆ ಎಡತಾ ದಿನಗಳು ರದ್ದು ಮಾಡಲ್ಪಟ್ಟಿರುತ್ತೆ.

1896ನೇ ಏಪ್ರೆಲ್ 16ನೇ ಮಕ್ಕಂ 9441.—ರೆ. ಫೈ. 96.—95ನೇ ನಂ.
1896ನೇ ಮೇ 3ನೇ ಮಕ್ಕಂ ಕ್ಯಾಂಪ್ 248ನೇ ನಂ.
1896ನೇ ಜೂ॥ 10ನೇ ಮಕ್ಕಂ 10732.—ರೆ. 4232ನೇ ನಂ.

ನಂ. 3226.—ರೆ. ಫೈ. 54.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಕೋಲಾರ್ ಡಿಸ್ಟ್ರಿಕ್ಟ್ಸು ಚಿಕ್ಕಬಳ್ಳಾಪುರದ ಸಬ್ ಡಿವಿಜ್ಞ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಎಸ್. ದೊರಸಾಮಿ ಅಯ್ಯರ್ ಯವರಿಗೆ 1896ನೇ ಆಗಸ್ಟ್ 24ನೇ ತಾರೀಖಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

397

ತಾರೀಖು 27ನೇ ಆಗಸ್ಟ್ 1896.

ನಂ. 2245.—ಫಾ. ಫೈ. 96.—95, ಸ್ ೧೮೭೮ನೇ ಇಸವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನ್‌ಮೆಂಟಿನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿಕಂಡ ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಸರಹದ್ದು ವಿಂಗಡಿಸಿ ವ ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟುಗಳು ಮೇಲೆ ಹೇಳಲ್ಪಟ್ಟ ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಡ ತಕ್ಕದ್ದು:—

ತಾಲ್ಲೂಕು.	ಫಾರೆಸ್ಟಿನ ಹೆಸರು.	ಸುಮಾರು ವಿಸ್ತೀರ್ಣ.	ಚಕ್ಕುಬಂದಿ.
ಚಿಂತಾಮಣಿ ತಾಲ್ಲೂಕು ವ ಶ್ರೀನಿವಾಸಪುರ ಸಬ್ ತಾಲ್ಲೂಕ್	ರಾಯಪ್ಪಪಾಡ್ ಸ್ಟೇಟ್ ಫಾರೆಸ್ಟು, ಮುದುಮುಡುಗು ಸುಣಕಲ್ ಬ್ಲಾಕ್ ನಂ. I.	21¼ ಚದುರ ಮೈಲಿಗಳು.	ಉತ್ತರಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟಲೈನು ಮುದುಮುಡುಗು ಗ್ರಾಮದ (ಸರ್ವೆ ನಂ. 144) ದೊಡ್ಡೇಶ್ವರ ಮಲೆಗುಟ್ಟದಿಂದ ಹೊರಟು ಸದರೀ ಗ್ರಾಮದ ಸರ್ವೆ ನಂ. 143, 142 ವ 345 ಇವುಗಳ ಕಡೆಗೂ ಹಾದು ಹೋಗುತ್ತದೆ. ಪೂರ್ವಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಮತ್ತು ಉತ್ತರ ಆರ್ಕಾಟು ಡಿಸ್ಟ್ರಿಕ್ಟುಗಳು, ಸದರೀ ಲೈನು ಗುಂಟಪಲ್ಲಿ ಗ್ರಾಮದ ಸರ್ವೆ ನಂ. 16ರ ಕಡೆಗೂ ಯಜೆಬಿಡದೆ ಹೋಗಿ, ಬೆಂಗಳೂರು ಕಡಪಾ ಹೈ ರೋಡಿನ ಮೂರು ಟಾಂದುಗಳು ವ ಎಲ್ಲೆ ಕಲ್ಲಿನ ಸಮೀಪ ಹಾದು ಮೇಲ್ಕಂಡ ಗ್ರಾಮದ ಸರ್ವೆ ನಂ. 17 ವ 18 ಮತ್ತು (ಸುಣಕಲ್ ಗ್ರಾಮದ) ಸರ್ವೆ ನಂ. 20, (ಜಿದಮಾಕಲಪಲ್ಲಿ ಗ್ರಾಮದ) ಸರ್ವೆ ನಂ. 47 ವ 52, (ಮುಲ್‌ಗೊಲ್‌ಪಲ್ಲಿ ಗ್ರಾಮದ) ಸರ್ವೆ ನಂ. 1 ಮತ್ತು (ಕೊಂಟಿಂಪಲ್ಲಿ ಗ್ರಾಮದ) ಸರ್ವೆ ನಂ. 100 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ. 85, (ಪಂದಿವಾರಪಲ್ಲಿ) ಸರ್ವೆ ನಂ. 15, (ಸಾತನೂರ) ಸರ್ವೆ ನಂ. 5, (ಕೊತ್ತಿ ಪೇಟೆ) ಸರ್ವೆ ನಂ. 57, 137, 127, 111, 112, 94 ವ 89 ಮತ್ತು ಮರಿಮಾಕಲಪಲ್ಲಿಯ ಸರ್ವೆ ನಂ. 47, ಈರಪಲ್ಲಿಯ ಸರ್ವೆ ನಂ. 15 ಮತ್ತು ತುಪ್ಪಲ್ಲೆ ಗ್ರಾಮದ ಸರ್ವೆ ನಂ. 62 ಇವುಗಳ ಕಡೆಗೂ ಹೋಗಿ ಬೆಂಗಳೂರು ಕಡಪಾ ಹೈ ರೋಡಿನ 64ನೇ ಮೈಲಿ ಕಲ್ಲಿನಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಬೆಂಗಳೂರು, ಕಡಪಾ ಹೈ ರೋಡು 68ನೇ ಮೈಲಿಕಲ್ಲಿನ ವರೆಗೆ ಪಶ್ಚಿಮ ಸರಹದ್ದಾಗಿ, ಆ ತರುವಾಯ 4 ವ 5ನೇ ಫರ್ಲಾಂಗ ಕಲ್ಲುಗಳ ಮಧ್ಯೆ ಈ ರಸ್ತೆಯನ್ನ ದಾಟಿ, ಗುಂಟಪಲ್ಲಿಯ ಸರ್ವೆ ನಂ. 14, ತಿಮ್ಮಲಪಲ್ಲಿಯ ಸರ್ವೆ ನಂ. 26, ಮುಳ್ಳು ಮುತ್ತುಕಪಲ್ಲಿಯ ಸರ್ವೆ ನಂ. 1, ಮುದುಮುಡುಗಿನ ಸರ್ವೆ ನಂ. 140 ವ 141, ಬೊಡ್ಡಿಪಲ್ಲಿ ಗ್ರಾಮಗಳ ಸರ್ವೆ ನಂ. 19 ವ 1 ಇವುಗಳ ಕಡೆಗೂ ಹೋಗಿ, ಹೊರಟ ಸ್ಥಳವನ್ನು ಕೇರುತ್ತದೆ.
	ಬ್ಲಾಕ್ ನಂ. II, ವಲ್ಲೆಕೊಂಡ ಫಾರೆಸ್ಟು.	7⅐ ಚದುರ ಮೈಲಿಗಳು.	ಪೂರ್ವಕ್ಕೆ—ಹದ್ದು ವಿಂಗಡಿಸಲ್ಪಟ್ಟ ಲೈನು ಕೊತ್ತವಾರಪಲ್ಲಿಯ ಸರ್ವೆ ನಂ. 17ರಿಂದ ಹೊರಟು, ವೇಪಲಪಲ್ಲಿಯ ಸರ್ವೆ ನಂ. 20 ವ 119, ತಿಮ್ಮಲಪಲ್ಲಿಯ ಸರ್ವೆ ನಂ. 120 ವ 142 ಮತ್ತು ಮಂಜೇವಾರಪಲ್ಲಿ ಗ್ರಾಮಗಳ ಸರ್ವೆ ನಂ. 93 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಬಸವನಪಲ್ಲಿಯ ಸರ್ವೆ ನಂ. 22, ಗುಡಸ್ವಾರಪಲ್ಲಿಯ ಸರ್ವೆ ನಂ. 29, ಉಪ್ಪಾರಪಲ್ಲಿಯ ಸರ್ವೆ ನಂ. 42 ಮತ್ತು ಯರ್ರಂವಾರಪಲ್ಲಿ ಗ್ರಾಮಗಳ ಸರ್ವೆ ನಂ. 54 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಪತ್ತೂರ ಸರ್ವೆ ನಂ. 45, ತಂದ್ರಂಪಲ್ಲಿಯ ಸರ್ವೆ ನಂ. 26, ಬಲ್ಲು ಮಾರಿಯ ಸರ್ವೆ ನಂ. 11 ವ 107, ಕೊತ್ತಪಲ್ಲಿಯ ಸರ್ವೆ ನಂ. 36, 11, 10, 100, 99 ವ 50 ಮತ್ತು ಈರಗಪಲ್ಲಿ ಗ್ರಾಮಗಳ ಸರ್ವೆ ನಂ. 81 ವ 96 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಸದರೀ ಲೈನು ಈರಗೇಪಲ್ಲಿಯ ಸರ್ವೆ ನಂ. 81 ವ 96, ವಾಣೇಶ್ವರಪಲ್ಲಿಯ ಸರ್ವೆ ನಂ. 52, ಕೊತ್ತಪಲ್ಲಿಯ ಸರ್ವೆ ನಂ. 50 ವ 99 ಮತ್ತು ಕೊತ್ತವಾರಪಲ್ಲಿ ಗ್ರಾಮಗಳ ಸರ್ವೆ ನಂ. 1 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನ ಕೇರುತ್ತದೆ.
	ಬ್ಲಾಕ್ ನಂ. III, ವಾಲೇಶ್ವರಪೆಟ್ಟ ಫಾರೆಸ್ಟು.	2⅚ ಚದುರ ಮೈಲಿಗಳು.	ಪೂರ್ವಕ್ಕೆ—ಮದ್ರಾಸ್ ಪ್ರೆಸಿಡೆನ್ಸಿಯ ಉತ್ತರ ಆರ್ಕಾಟು ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟ ಲೈನು ಬಾವಲಪಲ್ಲಿಯ ಸರ್ವೆ ನಂ. 8ರಿಂದ ಹೊರಟು, ಕೋನಂಪಲ್ಲಿಯ ಸರ್ವೆ ನಂ. 40 ವ 28 ಮತ್ತು ಗುಟ್ಟಪಲ್ಲಿ ಗ್ರಾಮಗಳ ಸರ್ವೆ ನಂ. 34 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಟ್ಟಪಲ್ಲಿಯ ಸರ್ವೆ ನಂ. 33 ವ 34, ಕೋನಂಪಲ್ಲಿಯ ಸರ್ವೆ ನಂ. 4, ಬೋಮನಪಲ್ಲಿಯ ಸರ್ವೆ ನಂ. 10 ವ 56 ಮತ್ತು ಬಾಚವಾರಪಲ್ಲಿ ಗ್ರಾಮಗಳ ಸರ್ವೆ ನಂ. 47 ಇವುಗಳ ಕಡೆಗೂ ಹೋಗುತ್ತದೆ.

ತಾಲ್ಲೂಕು.	ಫಾರೆಸ್ಟಿನ ಹೆಸರು.	ಪುವೋರು ವಿಸ್ತೀರ್ಣ.	ಜಕ್ಕು ಬಂದಿ.
ಚಿಂತಾಮಣಿ ತಾಲ್ಲೂಕು ಮತ್ತು ಶ್ರೀನಿವಾಪುರ ಸಬ್‌ತಾಲ್ಲೂಕು	ಬ್ಲಾಕ್ ನಂ. III, ವಾಲೇಶ್ವರ ಬೆಟ್ಟ ಫಾರೆಸ್ಟು.	2½ ಚದುರ ಮೈಲಿಗಳು.	ಪಶ್ಚಿಮಕ್ಕೆ —ಈ ಸ್ಥಳದಿಂದ ಅದು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ. 16 ಮತ್ತು ಇಲದೊಣೆ ಗ್ರಾಮದ ಸರ್ವೆ ನಂ. 197 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ —ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಂಜಾರಗೋನಪಲ್ಲಿಯ ಸರ್ವೆ ನಂ. 1, ಮೂಚವಾರಪಲ್ಲಿ ಗ್ರಾಮಗಳ ಸರ್ವೆ ನಂ. 35 ವ 45 ಇವುಗಳ ಕಡೆಗೂ ಹಾದು ಹೊರಟ ಸ್ಥಳವನ್ನ ಕೇರುತ್ತದೆ.
ಚಿಂತಾಮಣಿ	ಅಡಗಲ್ಲು ನೆಲವಂಕಿ ಜಂಗಲ್.	5¾ ಚದುರ ಮೈಲಿಗಳು.	ಪೂರ್ವಕ್ಕೆ —ಹದ್ದು ವಿಂಗಡಿಸಲ್ಪಟ್ಟ ಲೈನು ಬುರ್ಗಮಾಕಲಪಲ್ಲಿ ಗ್ರಾಮದ ಸರ್ವೆ ನಂ. 44ರಿಂದ ಹೊರಟು ತೂಪಲ್ಲಿ ಗ್ರಾಮದ ಸರ್ವೆ ನಂ. 32ರ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ —ಸದರೀ ಲೈನು ಅಲ್ಲಿಂದ ಹೊರಟು ಮಂಚಿನೀಳ್ಳು ಕೋಟೆಯ ಸರ್ವೆ ನಂ. 188, ಗೊಲ್ಲಪಲ್ಲಿಯ ಸರ್ವೆ ನಂ. 16, ಪಾತ ನೆಲವಂಕಿಯ ಸರ್ವೆ ನಂ. 18, ಸೊಣಾಪಲ್ಲಿಯ ಸರ್ವೆ ನಂ. 14 ವ 30, ಕುರಪಲ್ಲಿಯ ಸರ್ವೆ ನಂ. 69, ತಿಮ್ಮನಪಲ್ಲಿ ಗ್ರಾಮಕ್ಕೆ ಕೇರದ ಖರಾಬ್ ಜಮೀನ್ ವರಿವಿಗೂ ಮತ್ತು ಕೊಡಪಲ್ಲಿಯ ಸರ್ವೆ ನಂ. 17 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ —ಮೇಲ್ಕಂಡ ಸ್ಥಳದಿಂದ ಸದರೀ ಲೈನು ಹೊರಟು ದಿಗವಮಾರಂಪಲ್ಲಿಯ ಸರ್ವೆ ನಂ. 61, 67 ವ 64, ತಿಮ್ಮನಪಲ್ಲಿಯ ಸರ್ವೆ ನಂ. 26, 40, 66, 72 ವ 52 ಮತ್ತು ಕಂಬಲಪಲ್ಲಿಯ ಸರ್ವೆ ನಂ. 27 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ —ಈ ಸ್ಥಳದಿಂದ ಸದರೀ ಲೈನು ಹೊರಟು ತುಮ್ಮೂರು ಪಲ್ಲಿಯ ಸರ್ವೆ ನಂ. 39, 28, 112, ಅಡಗಲ್ ಗ್ರಾಮದ ಸರ್ವೆ ನಂ. 87, 79, 189 ವ 156 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನು ಕೇರುತ್ತದೆ.

ತಾರೀಖು 24ನೇ ಸಪ್ಟಂಬರ್ 1896.

ನಂ. 3352.—ರೆ. ಫೈ. 57.—96, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟ್ ಸಿರಾ ತಾಲ್ಲೂಕು ಅಮಲ್ದಾರ್ ವಿ. ವೇದಾಂತ ದೇಶಿಗಂ ಅಯ್ಯಂಗಾರ್‌ರವರಿಗೆ, 1896ನೇ ಸೆಪ್ಟಂಬರ್ 14 ವ 15ನೇ ಮರ್ಕುಂಗಳಲ್ಲಿ ಎರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ತಾಲ್ಲೂಕು ಸಿರಸ್ತೇದಾರ್ರು ಅಮಲ್ದಾರ್ರ ಗೈರ್ ಹಾಜರಿಯಲ್ಲಿ ಸದರೀ ತಾಲ್ಲೂಕಿನ ಜಾಲ್ತೀ ಕೆಲಸಗಳ ಚಾರ್ಜಿನಲ್ಲಿದ್ದರು.

ತಾರೀಖು 26ನೇ ಸೆಪ್ಟಂಬರ್ 1896.

ನಂ. 3371.—ಫೈ. 255, ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 171ನೇ ಆರ್ಟಿಕಲ್ ಅನುಸರಿಸಿ, ಸ್ಟೇಟ್ ಹುಜೂರು ಟ್ರೆಜರಿಯ ಚಾರ್ಜಿನಲ್ಲಿರುವ ಆಫಿಸರ್ ಮೆ|| ಪಿ. ವೀರಾಸಾಮಿ ಮೊದಲಿಯಾರ್‌ಗೆ, ಮಾಹೆ ಮಜಕೂರು 28ನೇ ತಾರೀಖಿನ ಲಾಗಾಯತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ಟ್ರೆಜರರು ಮೆ|| ರಾಯಲು ಚಟ್ಟಯ್ಯವರು ಸದರೀ ಮೆ|| ವೀರಾಸಾಮಿ ಮೊದಲಿಯಾರ್ರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ತಮ್ಮ ಕೆಲಸಗಳೊಂದಿಗೆ ಸದರೀ ಟ್ರೆಜರಿಯ ಚಾರ್ಜಿನಲ್ಲಿ ಹಂಗಾಮಿಯಾಗಿ ಇರತಕ್ಕದ್ದು.

ತಾರೀಖು 25ನೇ ಸೆಪ್ಟಂಬರ್ 1896.

ನಂ. 3394.—ರೆ. ಫೈ. 99.—95, ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ರು ಡಿ. ಸುಬ್ಬರಾಯರಿಗೆ, 1896ನೇ ಆಗಸ್ಟ್ 27ನೇ ಮರ್ಕುಂ 2264.—ರೆ. ಫೈ. 99.—95ನೇ ನಂಬರು ಗವರ್ನಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಹದಿನೈದು ದಿನಗಳ ಕ್ಯಾಜುಯಲ್ ರಜಾವನ್ನ 1896ನೇ ಆಗಸ್ಟ್ 24ನೇ ತಾರೀಖಿನ ಪೂರ್ವಾನ್ಹದ ಲಾಗಾಯತು ಉಪಯೋಗಿಸಿಕೊಂಡು 1896ನೇ ಸೆಪ್ಟಂಬರ್ 7ನೇ ಮರ್ಕುಮಿನ ಪೂರ್ವಾನ್ಹದಲ್ಲಿ ಸದರೀಯವರು ಕೆಲಸಕ್ಕೆ ವಾಪಸ್ ಬಂದದ್ದರಿಂದ ಉಪಯೋಗಿಸಿಕೊಳ್ಳದ ಮೇಲ್ಕಂಡ ರಜಾದ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 11ನೇ ಆಗಸ್ಟ್ 1896.

ನಂ. 1618.—ಎಕ್ಸೈ. 64, ಸ್ಯ 1881ನೇ ಇಸವಿಯ XXIIನೇ ನಂಬರ್ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳ ದೆಸೆಯಿಂದ ಕಂಟ್ರಿ ಬೀರು ಅಂಗಡಿಗಳ ವಾರಾಟದ ಬಗ್ಯೂ ಮತ್ತು ಕಂಟ್ರಿ ಬೀರು ಯಾ ಪೋರ್ಟರು ಚಿಲ್ಲರೆವಾಗಿ ವಾರುವದಕ್ಕೆ ಲೈಸೆನ್ಸಿಗಾಗಿಯೂ ನೋಟಿಸನ ಈ ಕೆಳಗೆ ಕಂಡ ನಮೂನೆಯನ್ನ ಮೈಸೂರು ಗವರ್ನಮೆಂಟಿನವರು ವಿಧಿಸಿರುತ್ತಾರೆ:—

ನೇ ವರುಷಕ್ಕಾಗಿ ಲ್ಲಿ ಇರತಕ್ಕ ಕಂಟ್ರಿ ಬೀರು ಅಂಗಡಿಗಳ ಹರಾಜು ನೋಟಿಸು.

1. ಇದರಿಂದ ಪ್ರಸಿದ್ಧ ಪಡಿಸುಹದೇನೆಂದರೆ,—ಇದಕ್ಕೆ ಜಂಟಿಸಲ್ಪಟ್ಟ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮೂರು ಅಂಗಡಿಗಳ ಪ್ರತಿ ಒಂದರಲ್ಲೂ ಕಂಟ್ರಿ ಬೀರು ಯಾ ಪೋರ್ಟರು 189 ನೇ ಜುಲೈ 1ನೇ ತಾರೀಖಿನಿಂದ ಪ್ರಾರಂಭಿಸಿ 189 ನೇ ಜೂನ್ 30ನೇ ತಾರೀಖಿಗೆ ಆಖೈರಾಗುವ ಹನ್ನೆರಡು ತಿಂಗಳುಗಳ ಕಾಲಕ್ಕಾಗಿ ಬಿಕರಿ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಡಿಸ್ಟ್ರಿಕ್ಟ್ ಆಫಿಸಿನಲ್ಲಿ ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲು ಮಾಡುವದಕ್ಕೆ ಪೂರ್ವ 50 ರೂಪಾಯಿ ಯಾ ಹರಾಜು ನಡಿಸತಕ್ಕ ಆಫಿಸರರಿಂದ ಗೊತ್ತು ಮಾಡಲ್ಪಡಬಹುದಾದ ಇತರ ನ್ಯಾಯವಾದ ಮೊಬಲಗು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಯೂ ಅಂಗೀಕರಿಸಲ್ಪಟ್ಟ ಚಡದರಖಾಸ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ವಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ತೋರಿಸದೆ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೈಯುಳ್ಳವರು ತಾವೇ ಖುದ್ದಾಗಿಯಾಗಲಿ ಯಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಮುಖ್ತಾರೀಕರಾಗಲಿ ಹಾಜರಾಗಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ಮೇರೆ ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ್ ಮಾಡಲ್ಪಡುವವು. ಹರಾಜು ನಡಿಯುವ ಕಾಲದಲ್ಲಿ ಪ್ರತಿ ಅಂಗಡಿಗಾಗಿ ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರು ತಕ್ಷಣವೇ ಆ ಅಂಗಡಿಯ ಬಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಹಾಗೆ ಇಡಲಿಕ್ಕೆ ತಪ್ಪಿದಲ್ಲಿ 2ನೇ ಪ್ಯಾರಾ ಅನುಸರಿಸಿ ಆತನಿಂದ ಇಟ್ಟುರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಪುನಶ್ಚ ಮೇರೆ ಕಂಡ ಷರತ್ತುಗಳಿಗೆ ಒಳಪಟ್ಟು ತಕ್ಷಣವೇ ಹರಾಜಾಗುವದಲ್ಲದೆ ಆತನು ಪುನಃ ಈ ಅಂಗಡಿಗಾಗಲಿ ಅಥವಾ ಇತರ ಯಾವ ಅಂಗಡಿಗಾಗಲಿ ಸವಾಲ್ ಮಾಡ ಕೂಡದು.

4. ಯಾರ ಹೆಸರಿಗೆ ಸದರೀ ಅಂಗಡಿಗಳು ಹರಾಜಿನಲ್ಲಿ ನಿಲ್ಲಲ್ಪಡುತ್ತೋ ಮತ್ತು 2 ವ 3ನೇ ಪ್ಯಾರಾಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜಿನ ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನು ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಕೇಸಬೇಕಾಗಿರುತ್ತೋ ಅಷ್ಟು ಜಾಸ್ತೀ ಮೊಬಲಗನ್ನು ಠೇವಣಿ ಕಟ್ಟಿಇದಕ್ಕೆ ಜಂಟಿಸಿರುವ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನ ಪಡೆಯತಕ್ಕದ್ದು. ಮತ್ತು ಬಂದು ಎದುರು ಬಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಯದುರು ಬಡಂಬಡಿಕೆ ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರಿ ಮೇಲೆ ಮರಳಿ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿದ್ದ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ತರುವಾಯ ಕೊಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸ್ದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

5. ಮೇಲಿನ ನಾಲ್ಕನೇ ಪ್ಯಾರಾ ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿ ಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ, ಮತ್ತು ದುಸರಾ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜು ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಬಾಕಿ ದುಸರಾ ಹರಾಜಿನಲ್ಲಿ ಚಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜೊತೆ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರಾ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಂಡಿರುವ ಠೇವಣಿ ಮೊಬಲಗು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜರ್ಮಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು. ಆದರೆ ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಟ್ಟ ಠೇವಣಿ ಮೊಬಲಗು ದುಸರಾ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಅಂಥಾ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೇ ಜಮಾ ಮಾಡಿಕೊಳ್ಳಲ್ಪಡುವದು.

6. ಮೇಲಿನ 4ನೇ ಪ್ಯಾರಾ ಅನುಸರಿಸಿ ಪಡೆಯಬೇಕಾದ ಲೈಸೆನ್ಸು ಈ ಕೆಳಗೆ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಮೆಸರ್ಸ್ ಲೀಷ್‌ಮ್ಯಾನ್ ಅಂಡ್ ಕೋ ಯವರಿಂದಲೂ ಅಥವಾ ಕೊಯಿಮತ್ತೂರಿನಲ್ಲಿ ಮೆಸರ್ಸ್ ಮಾರ್ಕೆ ಅಂಡ್ ಕೋ ಯವರಿಂದಲೂ ಕಾಯಿಸಲ್ಪಟ್ಟ ಕಂಪ್ಯು ಬೀರು ಯಾ ಪೋರ್ಟರು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ತಾಲ್ಲೂಕು ಖಜಾನೆಗೆ 189ನೇ ಜುಲೈ ಲಾಗಾಯತು ಪ್ರಾರಂಭಿಸಿ ಸರಿಯಾದ ತಿಂಗಳು ಗಟ್ಟೆ ಖಿಸ್ತು ಗಳ ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿ ಬಂದು ಖಿಸ್ತು ಅದು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗಾಗಿ ಭಾವಿಸಲ್ಪಡತಕ್ಕದ್ದು. ಪ್ರತಿ ಬಂದು ತಿಂಗಳ ಗುತ್ತಿಗೆ ಮೊಬಲಗೂ ಇವಕ್ಕಾಗಿ ಗೊತ್ತಾಗಿರುವ ಜರ್ಮಲ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಲೈಸೆನ್ಸುದಾರನಿಂದ ಠೇವಣಿ ಇಟ್ಟಿರುವ ಎರಡು ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕಡೇ ಎರಡು ತಿಂಗಳಿಗಾಗಿ ಕೊಡತಕ್ಕ ಗುತ್ತಿಗೆ ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡತಕ್ಕದ್ದು. ಸದರೀ ತಿಂಗಳ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜರ್ಮಿ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳನುಸರಿಸಿ ವರುಷಕ್ಕೆ ಕೇಕಡಾ 6 ರೂಪಾಯಿನಂತೆ ಬಡ್ಡೀನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸುದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ಯಾ ವಜಾ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸುದಾರನು ಆತನಿಂದ ಕೊಂಡೆಕೊಳ್ಳಲ್ಪಟ್ಟ ಕಂಪ್ಯು ಬೀರು ಯಾ ಪೋರ್ಟರ ಪ್ರತಿ ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸುದಾರನಿಂದ ಕೊಂಡುಕೊಂಡು ಕಳುಹಿಸತಕ್ಕ ಕಂಪ್ಯು ಬೀರು ಯಾ ಪೋರ್ಟರು ಖ್ರೀಯರಿಯಿಂದ ತಾಲ್ಲೂಕು ಅಮಲೀದಾರ್ರಿಗೆ ಸೀದಾ ರವಾನಿಸಲ್ಪಡತಕ್ಕದ್ದು, ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯು ಇಮ್ಮಡಿಯಾಗಿರತಕ್ಕದ್ದು, ಅಸಲ್ ಪ್ರತಿಯು ತಾಲ್ಲೂಕು ಅಮಲೆದಾರ್ರಿಗೂ ಮತ್ತು ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರಿಗೂ ಕಳುಹಿಸತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ದರದ ಮೇರಿಗೆ ಹಾಸಲ್ ಮೊಬಲಗು ಗೊತ್ತಾದ ಚಲನಿನಲ್ಲಿ ಲೈಸೆನ್ಸುದಾರನಿಂದ ಪಾವತಿ ಆದ ನಂತರ ಅಮಲ್‌ದಾರ್ರು ಸರಕನ್ನು ಲೈಸೆನ್ಸುದಾರನು ತನ್ನ ಅಂಗಡಿಗೆ ಸಾಗಿಸಲು ತಮ್ಮಿಂದ ಯಾ ಈ ವಿಷಯದಲ್ಲಿ ಅವರಿಂದ ಅಧಿಕಾರ ಪಡೆದ ಇತರ ಆಫಿಸರರಿಂದ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಲ್ಲಿರತಕ್ಕ ಪ್ರತಿ ಅಂಗಡಿಯ ಲೈಸೆನ್ಸ್‌ದಾರನೂ ಮ್ಯುನಿಸಿಪಲ್ ರೆಗ್ಯುಲೇಷ್ನ ಅನುಸರಿಸಿ ತನ್ನ ಅಂಗಡಿಯ ಲೈಸೆನ್ಸಿನ ಕಾಲಕ್ಕಾಗಿ ವರುಷ ಒಂದಕ್ಕೆ 180 ರೂಪಾಯಿನ ದರದ ಮೇರಿಗೆ ಅಡ್ವಾನ್ಸಾಗಿ ರಿಜಿಸ್ಟ್ರೇಷ್ನ ಫೀಯನ್ನು ಕೊಡತಕ್ಕದ್ದು.

(6) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು, ಮತ್ತು ಲೆಕ್ಕಗಳು, ಬೀರು ಯಾ ಪೋರ್ಟರು ಸಾಗಿಸುವ ಬಗ್ಗೆ ಬೇಕಾದ ರಹದಾರಿಗಳು ಅಥವಾ ಪಾಸುಗಳು ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸ್‌ದಾರನು 189 ನೇ ಜುಲೈ 1ನೇ ಮತ್ತು ಮಿನಲ್ಲಿ ಸದರೀ ಅಂಗಡಿಯಲ್ಲಿ ಕಿಲ್ಕಿನಲ್ಲಿ ಉಳಿಯಬಹುದಾದ ಬಿಟ್ಟು ಹೋಗುವ ಲೈಸೆನ್ಸ್‌ದಾರನಿಗೆ ಕೇಳಿದ ಅಂಥಾ ಬೀರು ಯಾ ಪೋರ್ಟರನ್ನ ಎಕ್ಸೈಜ್ ಕಮ್ಮಿಷನರವರಿಂದ ನಿಷ್ಕರ್ಷಿಸಲ್ಪಡಬಹುದಾದ ಲಾಗವಡು ಸದರೀಯವನಿಗೆ ಕೊಟ್ಟು ತೆಗದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

(8) ಲೈಸೆನ್ಸ್‌ದಾರನು ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಗೆ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳ ಮೇರೆ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬೂಕಿ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸ್‌ದಾರನಾಗಲಿ ಯಾ ಆತನ ತಿಳುವಳಿಕೆ ವ ಸಮ್ಮತಿಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ಅಥವಾ ಲೈಸೆನ್ಸ್‌ದಾರನು ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಡೆಪ್ಯುಟಿ ಕಮ್ಮಿಷನರು ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಉಲ್ಲಂಘನ ಯಾ ಅಶ್ರದ್ಧೆಗೆ 10 ರೂಪಾಯಿಗಳಿಗೆ ವಿಾರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಆವರಲ್ಲಿಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಮತ್ತು ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನೆ ಪುನಃ ಹರಾಜು ಮಾಡಲಿಕ್ಕೂ ಮೊಖ್ತ್ಯಾರಾಗಿರತಕ್ಕದ್ದು. ಇದರಿಂದುಂಟಾಗುವ ಎಲ್ಲಾ ನಷ್ಟವನ್ನೂ ಲೈಸೆನ್ಸ್‌ದಾರನು 189 ನೇ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರ ದೆಶೆಯಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಆತನಿಂದ ಭರ್ತೀ ಮಾಡಲ್ಪಡತಕ್ಕದ್ದು. ಗುತ್ತಿಗೆಯು ರದ್ದುಮಾಡಲ್ಪಟ್ಟಲ್ಲಿ ಪೂರಾ ಕಾಲದ ಗುತ್ತಿಗೆ ಮೊಬಲಗು ತಕ್ಷಣ ಪಾವತಿ ಮಾಡತಕ್ಕದ್ದು, ಮತ್ತು ಅಂಥಾ ಮೊಬಲಗು ಜಮ್ಮಿ ಕಂದಾಯದ ಬಾಕಿಗಳಂತೆ ಎಲ್ಲಾ ನಷ್ಟಗಳ ಸಹಿತ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂಪಿನ ಷರತ್ತಿನಲ್ಲಿ ವಿಧಿಸಲ್ಪಟ್ಟ ದಂಡನೆಗಳು ಜಾರೀಲಿರುವ ಯಕ್ಸೈಜ್ ಕಾನೂನುಗಳಿಗೆ ಯಾ ರೂಲುಗಳಿಗೆ ವಿರೋಧವಾಗಿ ಮಾಡಲ್ಪಟ್ಟ ಯಾವ ತಕ್ಕೀರಿಗೂ ಲೈಸೆನ್ಸ್‌ದಾರನನ್ನಾಗಲಿ ಯಾ ಆತನ ನೌಕರನನ್ನಾಗಲಿ ಆನಾದಿಸಿ ದಸ್ಯಾಫ್ತೀ ಕ್ರಮ ನಡಿಸಲು ಅತಂಕಪಡಿಸುವದಿಲ್ಲ.

ಪೆಡ್ಯೂಲ್.

ಸ್ಥಳದ ಹೆಸರು.	ಅಂಗಡಿಯ ಸೀರಿಯಲ್ ನಂಬರ್.	ಅಂಗಡಿ ಇರುವ ಸ್ಥಳ. ಡೋರ್ ನಂಬರ್.	ಸ್ಥಳ.	ಹಾಲೀ ಲೈಸೆನ್ಸ್‌ದಾರರ ಹೆಸರುಗಳು.	ಖರ್ಚು.			ಗುತ್ತಿಗೆಯ.	ಷರಾ.
							—ಯ 8 ತಿಂಗಳು.		
					ಪೀಪಾಯಿಗಳು.	ಪೀಪಾಯಿಗಳು.	ಪೀಪಾಯಿಗಳು.	ರೂ.	

ಬೀರ್ ಲೈಸೆನ್ಸ್.

ಕಂಟ್ರಿ ಬೀರನ್ನು ಯಾ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿಯ XXIIನೇ ನಂಬರ್ ಆಕ್ಟಿನ 12 ವ 13ನೇ ಸೆಕ್ಷನ್‌ಗಳನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್.
2. ಲೈಸೆನ್ಸ್‌ದಾರನ ಹೆಸರು.
3. ಮಾರುವವನ ಹೆಸರು.
4. ಸ್ಥಳ.

ಕಂಟ್ರಿ ಬೀರ್ ಮತ್ತು ಪೋರ್ಟರನ್ನು ನಂಬರ ಅಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ ಗೆ ಈ ಕೆಳಗಿನ ಷರತ್ತುಗಳನುಸರಿಸಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ ಆದ ನಾವು ಇದರಿಂದ ಅಧಿಕಾರವನ್ನು ಕೊಡುತ್ತೇವೆ:—

I. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗಾವಾಗತಕ್ಕದ್ದಲ್ಲ, ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ತಾವ ಜನರೂ ಇದರ ಆಧಾರದ ಮೇಲೆ ಕಾರ್ಯಗಳನ್ನ ನಡಿಸಲಿಕ್ಕೆ ಅಧಿಕಾರವಿರುವದಿಲ್ಲ.

II. ದುಕಾನ್‌ದಾರನು ಲೈಸೆನ್ಸ್‌ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗಿರುತ್ತಾನೆ, ಅವು ಯಾವವಂದರೆ.

III. ಅವನು ಬೀರ್ ಯಾ ಪೋರ್ಟರನ್ನು ಪೀಪಾಯಿ ಅಥವಾ ಬುಡ್ಡಿಯಿಂದಾಗಲಿ ಅಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕೇ ಹೊರತು ಇತರ ಯಾವ ತರಹೇದ ಬೀರ್ ಯಾ ಪೋರ್ಟರನ್ನಾಗಲಿ ಮಾರಕೂಡದು, ಮತ್ತು ಅಂಗಡಿಯಹೊರಗಡೆ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಯಕ್ಸೈಜ್ ಇಲಾಖೆಯವರಿಂದ ಕೊಡಲ್ಪಡುವ ರಹದಾರಿಗಳ ಆಧಾರದ ಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳುವವನೂ ಈ ಉಭಯತ್ರರೂ ಖಂಡಿತವಾಗಿ ನಡೆದುಕೊಳ್ಳಬೇಕು. ಅಂಥಾ ರಹದಾರಿಗಳ ಆಧಾರದಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲ್ಲನ್‌ಗಳು ಅಂದರೆ ಎಂಟು ಕೇರುಗಳಿಗಿಂತ ಹೆಚ್ಚಾಗಿರಕೂಡದು.

IV. ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಬೀರು ಯಾ ಪೋರ್ಟರು ಯಷ್ಟು ಮಟ್ಟಿಗಾದರೂ ಯಾವ ಯೂರೋಪಿಯರ್ ಅಥವಾ ನಾರ್ ಕಮ್ಮಿಷನೆಡ್ ಆಫಿಸರಿಗಾದರೂ ಯಾ ಪ್ರೈವೇಟ್ ಸೋಲ್ಜರಿಗಾದರೂ ಅಥವಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯರ್ ಯಾ ಈಸ್ಟಿಂಡಿಯರ್ ಹೆಂಗಸರಿಗಾದರೂ ಮಾರಲೂ ಕೂಡದು. ಅಥವಾ ಕೊಡಲೂ ಕೂಡದು, ಅವನು, ಅವಳು ಯಾ ಅವರುಗಳಿಗೆ ತನ್ನ ಅಂಗಡಿಯಲ್ಲಿ ಅಥವಾ ಅಂಗಡಿಯ ಆವರಣದಲ್ಲಿ ಬೀರು ಯಾ ಪೋರ್ಟರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿ ಯಾ ಅದಕ್ಕೆ ಸೇರಿದ ಆವರಣದಲ್ಲಿ ಜನಗಳು ಕುಡಿದು ನಿಷ್ಪ್ರಹತ್ತಿ ಬೀಳುವಂತೆ ಯಾ ಅವರು ಅಕ್ರಮವಾಗಿ ನಡಿಯುವಂತೆ ಅವಕಾಶ ಕೊಡಕೂಡದು, ಮತ್ತು ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆ ಮಾಡಕೂಡದು. ವ್ಯಭಿಚಾರಿಗಳನ್ನಾಗಲಿ ಯಾ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತಿಳಿದು ತನ್ನ ಅಂಗಡಿಗೆ ಬರುವಂತೆ ಯಾದರೂ ಅಥವಾ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಿಗಾದರೂ ಯಾ ಇತರರಿಗಾದರೂ ಅವರುಗಳು ಫರಾರಿಯಾದವರೆಂದು ತಿಳಿದು ಅಥವಾ ಅಂತವರೆಂದು ನಂಬುವದಕ್ಕೆ ಕಾರಣವಿದ್ದೂ ಅಂತವರಿಗೆ ತನ್ನ ಅಂಗಡಿಯಲ್ಲಿ ಮನಃಪೂರ್ತಿಯಾಗಿ ಸ್ಥಳ ಕೊಡಲೂ ಕೂಡದು ಯಾ ಛಪಾಯಿಸಿ ಇಡಲೂ ಕೂಡದು. ಗುಮಾನೀ ನಡತೆಗಳುಳ್ಳ ಜನಗಳ ವಿಷಯಕವಾದ ವರ್ತಮಾನವನ್ನ ಮಾಜಿಸ್ಟ್ರೇಟರಿಗೆ ಯಾ ಪೋಲೀಸ್ ಆಫಿಸರರಿಗೆ ತಿಳಿಸಬೇಕು, ಮತ್ತು ಉದ್ಯೋಗದ ಮೇಲಿರುವಾಗ ಯಾವದ ಪೋಲೀಸ್ ಆಫಿಸರರಿಗಾಗಲಿ, ರ್ವೈವ್ಸ್ ನಾಕರನಿಗಾಗಲಿ ಯಾ ಯಕ್ಸೈಜ್ ಆಫಿಸರರಿಗಾಗಲಿ ಬೀರು ಯಾ ಪೋರ್ಟರನ್ನು ಮಾರಲೂ ಕೂಡದು ಅಥವಾ ಕೊಡಲೂ ಕೂಡದು.

V. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ನೊಂಪು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರು ಮತ್ತು ಅವರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರು ಸಹ ವ್ಯಕ್ತವಾಗಿ ಬರಸಿ ಇಡಬೇಕು.

VI. ಅವನು ಯಾವ ಪದಾರ್ಥಗಳನ್ನಾಗಲಿ ಬದಲಿಯಾಗಿಯಾದರೂ ಯಾ ಅಜಮಾನವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲ್ಲನ್ ವೊಂದಕ್ಕೆ ವೊಂದು ರೂಪಾಯಿನ ಲಾಗಾಯತು ವೊಂದು ರೂಪಾಯಿ ನಾಲ್ಕಾಣೇ ವರಿವಿಗೂ ಮತ್ತು ಜಿಲ್ಲರಿಯಾಗಿ ಮಾರುವದಕ್ಕೆ ದಾವಾಷಾಯಿ ಪ್ರಕಾರವೂ ನಗದಾಗಿ ಹಣ ತೆಗದುಕೊಳ್ಳಬೇಕು.

VII. ಈ ಲೈಸೆನ್ಸ್ ಪ್ರಕಾರ ಮಾರುವ ಬೀರು ವ ಪೋರ್ಟರು ವೊಂದು ಹಾಗ್ಸ್ ಹೆಡ್‌ಯಾನೆ ಪೀಪಾಯಿಗೆ ಮೊಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಕೇಕಡಾ 75ರಷ್ಟನ್ನೂ ಮತ್ತು ಕೆಂಟು ದೇಶದಲ್ಲಿ ಬೆಳದಂಥಾ ವಳ್ಳೇದಾಗಿರುವ 3 ಪೌಂಡ್ಸ್ ಹಾಪ್ಸ್ ಎಂಬ ಹುವ್ವುಗಳನ್ನೂ ಶೇರಸಬೇಕು, ಮತ್ತು ಮೇಲ್ಕಂಡ ಬೀರು ವ ಪೋರ್ಟರು ಭಟ್ಟೀ ಇಳಿಸತಕ್ಕವರಿಂದ ಖರೀದಿಗೆ ತಂದ ಹಾಗೆ ನೀರು ಬೆರಸದೆ ಯಾ ಇತರ ಪದಾರ್ಥ ಮಿಶ್ರಪಡಿಸಿ ಕೆಡಿಸದೆ ಅದೇ ತರಹೇದ್ದಾಗಿ ಮತ್ತು ಮಂದವಾಗಿರಬೇಕು. ಇಂಥಾ ಬೀರು ವ ಪೋರ್ಟರಿನ ಮಾದರಿಗಳು ಯಕ್ಸೈಜ್ ಇಲಾಖೆಯವರಿಂದ ಅಪೇಕ್ಷಿಸಿದಾಗ ತನಖಿ ಮತ್ತು ಅಜಮಾಯಿಷಿ ಮಾಡುವ ಬಗ್ಯಾಗಿ ಭಟ್ಟೀ ಕಾರಖಾನೆಯಿಂದ ಶೀಸೆಯಲ್ಲಿ ಕಳುಹಿಸಲ್ಪಡತಕ್ಕದ್ದು.

VIII. ಸ್ಥಳಿಕ ಅಧಿಕಾರವುಳ್ಳ ಯಾವ ಮಾಜಿಸ್ಟ್ರೇಟುಗಳಿಗಲಿ ಅಥವಾ ಮಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಯಾ ಯಾವ ಆಬ್‌ಕಾರಿ ಯಾ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಸದರೀ ಆವರಣದಲ್ಲಿರುವ ಬೀರು ಯಾ ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸದಾರನಿಂದಲೂ ವ ಮಾರುವವನಿಂದಲೂ ಇಡಲ್ಪಡಬೇಕಾದ ಅಂಗಡಿ ಲೆಕ್ಕಗಳನ್ನು ತನಿಖೀ ಮಾಡಲಿಕ್ಕೆ ಹಾಜರ್ಮಾಡಬೇಕು. ಅಂಥಾ ಲೆಕ್ಕಗಳು ಸಾಚಾ ಮತ್ತು ಕರಾರುವಾಕಾ ಆಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರೂ ನಾಶಪಡಿಸತಕ್ಕದ್ದು.

IX. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು, ಮತ್ತು ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

X. ಕಮ್ಮಿಸ್ಸರಿಯಾಟ್ ಇಲಾಖೆಗಾಗಿ ತರಲ್ಪಟ್ಟು ಮತ್ತು ಮಿಲಿಟರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟು ಬೀರನ್ನು ಯಾವ ಕಾರಣದಿಂದಲೂ ಅಂಗಡಿಯಲ್ಲಿ ಮಾರಲಿಕ್ಕೆ ಕಳುಹಿಸಲ್ಪಡಕೂಡದು.

XI. ಸದರೀ ಅಂಗಡಿಗೆ ಬಂದೇ ಬಾಗಲಿರಬೇಕು, ಮತ್ತು ಸದರೀ ಕಟ್ಟಡದ ಹಿಂಭಾಗದಲ್ಲಾದರೂ ಯಾ ಕೊನೇ ಭಾಗಗಳಲ್ಲಾದರೂ ಕಿಟಕಿ ಇಡಕೂಡದು. ಮದ್ಯ ಮಾರುವ ಜಾಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡಿ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆದುರಾಗಿರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

XII. ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪಿ ನಡದರೆ ಲೈಸೆನ್ಸದಾರನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟು ಮೇಲೆ 1881ನೇ ಇಸವಿಯ XXIIನೇ ನಂಬರಿ ಆಕ್ಟ್ಯು ಅನುಸರಿಸಿ ಜುರ್ಮಾನೆ ತರಲಿಕ್ಕೂ ಅಥವಾ ಸದರೀ ಆಕ್ಟಿನ 13ನೇ ಸೆಕ್ಷನ ಅನುಸರಿಸಿ ಲೈಸೆನ್ಸನ್ನ ಕಳೆದುಕೊಳ್ಳಲಿಕ್ಕೂ, ಯಾ ಇವೆರಡಕ್ಕೂ ಗುರಿಯಾಗತಕ್ಕದ್ದು.

XIII. ಈ ಲೈಸೆನ್ಸ 189 ನೇ ಇಸವಿ ನೇ ತಾರೀಖು ವರೆವಿಗೆ ಜಾರಿಯೇ ಹೊರತು ತದನಂತರವಲ್ಲ, ಆದರೆ ಇದು 1881ನೇ ಇಸವಿಯ XXIIನೇ ನಂಬರ್ ಆಕ್ಟಿನ 13 ವ 14ನೇ ಸೆಕ್ಷನಗಳನ್ನನುಸರಿಸಿ ಯಾವಾಗಾಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಅಥವಾ ಬಿಟ್ಟುಬಿಡಲ್ಪಡಬಹುದು.

ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್,
ಡಿಸ್ಟ್ರಿಕ್ಟು.

ಎದುರು ಒಡಂಬಿಕೆ.

ಈ ಕೆಳಗೆ ರುಜಾ ಮಾಡಿರುವ ಮೇಲ್ಕಂಡ ಲೈಸೆನ್ಸದಾರ ವ ಬಿಕರೀದಾರ ಮತ್ತು ಬಳಿಯಿರುವ ಬೀರ್ ಅಂಗಡಿಗೆ ಸಂಬಂಧಪಟ್ಟ ಇತರರಾದ ನಾವುಗಳು ನಮ್ಮಗಳಿಗಾಗಿಯೂ, ನಮ್ಮ ವಾರಸದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ ಇದರ ದೆಸೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ಪೊಪ್ಪಿರುತ್ತೇವೆ.

ತಾರೀಖಿನ ದಿನ ಡಿಸ್ಟ್ರಿಕ್ಟ್ ಡೆಪ್ಯೂಟಿ
ಕಮ್ಮಿಷನರವರ ಆಫಿಸಿನಲ್ಲಿ ನಮಗಳ ರೂಬರೂ ರುಜು ವ ಮೊಹರ್ ನಿಸಿ ಪೊಪ್ಪಿಸಲ್ಪಟ್ಟಿರುತ್ತೆ.
ಸಾಕ್ಷಿಗಳು.
1.
2.
3.

ಲೈಸೆನ್ಸ್‌ದಾರ್ ವ ಬಿಕರೀದಾರ್.

ಹುಕುಂ ಬವೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 442. ತಾರೀಖು 18ನೇ ಸೆಪ್ಟಂಬರ್ 1896ನೇ ಇಸವಿ, ಬೆಂಗಳೂರು.

ಕೊಲ್ಲೇಗಾಲ ಸಬ್ ತಾಲ್ಲೂಕಿನಲ್ಲಿರುವ ರಾಮಗಿರಿ ಶ್ರೀರಾಮದೇವರ ದೇವಸ್ಥಾನಕ್ಕೆ ಮೊಕರರಾಗಿ ಇದ್ದ ಧರ್ಮದರ್ಶಿಗಳ ಪೈಕಿ (1) ಛವತಿಯಾದ ಲಿಂಗಣ್ಣಯ್ಯಗೆ ಬದಲಾಗಿ ಕನ್ನಡ ಸ್ಕೂಲ್ ಹೆಡ್ಮಾಸ್ಟರ್ ಸೂರಪ್ಪನವರನ್ನೂ (2) ಹಾಲಿ ಗೈರ್ ಹಾಜರಾಗಿರುವ ಕುಪ್ಪಸಾಮಿ ಮೊದಲಿಯಾರ್‌ವರಿಗೆ ಬದಲಾಗಿ ಕೊಲ್ಲೇಗಾಲ ನಾರಾಯಣಸ್ವಾಮಿ ಮೊದಲಿಯಾರ್‌ವರನ್ನೂ ಸಹ ಧರ್ಮದರ್ಶಿಗಳಾಗಿ ನೇಮಿಸಿ ಇದೆ.

ನಂ. 476. ತಾರೀಖು 22ನೇ ಸೆಪ್ಟಂಬರ್ 1896, ಬೆಂಗಳೂರು.

ಮಾಗಡಿ ತಾಲ್ಲೂಕು ತಿರುಮಲೆಯಲ್ಲಿರುವ ಶ್ರೀರಂಗನಾಥಸ್ವಾಮಿಯವರ ದೇವಸ್ಥಾನಕ್ಕೆ ಈ ಕೆಳಗೆ ನಮೂದಿಸುವವರನ್ನು ಈ ಲಾಗಾಯತು ಯರಡು ವರುಷಗಳ ಪರ್ಯಂತ ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ.

1. ತಿರುಮಲೆಯಲ್ಲಿರುವ ಪೆರ್ಷ್ ಶೇಕದಾರ್ ರಂಗಂಣನವರು.
2. ಮ್ಯೂನಿಸಿಪಲ್ ಮೆಂಬರ್ ಸೂರಪ್ಪನವರು.

ನಂ. 477.

ಕೊಲ್ಲೇಗಾಲ ಸಬ್ ತಾಲ್ಲೂಕು ಬಿಡದಿಯಲ್ಲಿರುವ ಛತ್ರಕ್ಕೆ ನೇಮಿಸಿ ಇದ್ದ ಧರ್ಮದರ್ಶಿಗಳ ಪೈಕಿ ಕಾಳಪ್ಪನೆಂಬವರು ಛವತಿಯಾದ ಸಬಬು ಅವರಿಗೆ ಬದಲಾಗಿ ಬಿಡದಿ ಗಂಗಕಟ್ಟೆರನ್ನ ಈ ಲಾಗಾಯತು 2 ವರುಷಗಳ ಪರ್ಯಂತರ ಧರ್ಮದರ್ಶಿಯಾಗಿ ನೇಮಿಸಿ ಇದೆ.

ಏ. ಶ್ರೀನಿವಾಸಾಚಾರು,
ಮುಜರಾಯಿ ಸೂಪರ್‌ಟೆಂಡೆಂಟ್ ಮತ್ತು ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.

ಇನ್ಕ್ರಿಹಾರ್ನಾಮಾ.

ತಾರೀಖು 23ನೇ ಸೆಪ್ಟಂಬರ್ 1896.

ನಂ. 809.—5065, ಹೆಸರಘಟ್ಟದ ವಾಟರ್ ಸಪ್ಲೈ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಮೆಸ್ಸರ್ ಆರ್. ಟಿ. ಸ್ಕ್ಯಾಲ್ಡ್‌ವೆಲ್ ಯವರಿಗೆ ಬರುವ ತಿಂಗಳ ಗುರ್ರೇ ತಾರೀಖು ಲಾಗಾಯತು ಯಾ ಆವರು ಹೊರಟ ತಾರೀಖಿನಾರಭ್ಯ ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ ಗವರ್ನ್‌ಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರಿಟೆರಿ.